بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 31

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

04 ಆಗಸ್ಟ್ 2022, 04 ಸಫರ್ 1401 ಹಿಜರಿ ಶಮ್‌ಸಿ,
05 ಮುಹರ್ರಮ್ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَذَرِ الَّذِيْنَ اتَّخَذُوْا دِيْنَهُمْ لَعِبًا وَّلَهْوًا وَّغَرَّتْهُمُ الْحَيٰوةُ الدُّنْيَا

**(ಅಲ್ ಅನ್‌ಆಮ್ : 71)**

**ಅಂದರೆ: ತಮ್ಮ ಧರ್ಮವನ್ನು ಆಟ ಮತ್ತು ವಿನೋದವನ್ನಾಗಿ ಮಾಡಿದವರನ್ನೂ, ಐಹಿಕ ಜೀವನಕ್ಕೆ ಮೋಸ ಹೋದವರನ್ನೂ ನೀನು ಬಿಟ್ಟು ಬಿಡು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ರಿಝ್ಖ್‌ನಲ್ಲಿ (ಜೀವನಾಂಶದಲ್ಲಿ) ಸಮೃದ್ಧಿ ಹಾಗೂ ದೀರ್ಘಾಯುಷ್ಯಕ್ಕಾಗಿ ಒಂದು ಪಾಕವಿಧಾನ

(2067) ಹಝ್‌ರತ್ ಅನಸ್ ಬಿನ್ ಮಲಿಕ್(ರ) ಅವರು ವರದಿ ಮಾಡುತ್ತಾರೆ: ಪ್ರವಾದಿ ಮುಹಮ್ಮದ್(ಸ) ರವರು ಹೇಳುವುದನ್ನು ನಾನು ಕೇಳಿದೆ: ತನ್ನ ಜೀವನಾಂಶವನ್ನು ಹೆಚ್ಚಿಸಲು ಇಷ್ಟಪಡುವವನು (ಮತ್ತು ಒಳ್ಳೆಯ ಕಾರ್ಯಗಳಿಗೆ ಹೆಚ್ಚಿನ ಅವಕಾಶಗಳನ್ನು ಹೊಂದಲು) ಮತ್ತು ದೀರ್ಘಾಯುಷ್ಯವನ್ನು ಹೊಂದಬೇಕಾದರೆ ಅವನು ಕರುಣಾಮಯಿಯಾಗಬೇಕು.

**ವ್ಯಾಖ್ಯಾನ:** ಈ ಹದೀಸ್‌ನ ವ್ಯಾಖ್ಯಾನದಲ್ಲಿ, ಹಝ್‌ರತ್ ಸೈಯದ್ ಝೈನುಲ್ ಅಬೇದೀನ್ ವಲಿಯುಲ್ಲಾ ಷಾ ಸಾಹಿಬ್ ಹೇಳುತ್ತಾರೆ: "ಸಿಲಾಹ್ ರೆಹ್ಮಿ" ಯಂತಹ ಪ್ರಮುಖ ಕರ್ತವ್ಯವನ್ನು ಸಹ ಸಂಪತ್ತಿಲ್ಲದೆ ನಿರ್ವಹಿಸಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ, ಪವಿತ್ರ ಖುರ್‌ಆನ್‌ನ ತತ್ವ ಹೀಗಿದೆ: ಅವರು ಅಲ್ಲಾಹನೊಡನೆ ಮಾಡಿದ ಪ್ರತಿಜ್ಞೆಯನ್ನು ಪಾಲಿಸುವವರೂ ಮತ್ತು ಒಡಂಬಡಿಕೆಯನ್ನು ಮುರಿಯದಿರುವವರು ಆಗಿದ್ದಾರೆ ಮತ್ತು ಅಲ್ಲಾಹನು ಆದೇಶಿಸಿದ ಸಂಬಂಧವನ್ನು ಸ್ಥಿರಗೊಳಿಸುತ್ತಾರೆ......ಅಂತಹ ಜನರಿಗೆ ಆ (ಪಾರತ್ರಿಕ) ಗೃಹದ ಅತ್ಯುತ್ತಮ ಪರಸ್ಕಾರವಿದೆ. (ಅರ್ರಅ್‌ದ್: 21 ರಿಂದ 23) ಅಲ್ಲದೆ, ಈ ಸಂಬಂಧದಲ್ಲಿ, ಸೂರಾ ಅಲ್-ಬಕರದ ಈ ಆಯತ್‌ಗಳನ್ನು ನೋಡಿರಿ, ಇದರಲ್ಲಿ ಸಂಬಂಧಗಳನ್ನು ಕತ್ತರಿಸುವವರಿಗೆ ದಾರಿತಪ್ಪಿದವರು ಮತ್ತು ನಷ್ಟಹೊಂದಿರುವವರು ಎಂದು ವಿವರಿಸಲಾಗಿದೆ. ಆಯತ್‌ಗಳು ಹೀಗಿವೆ: ಅವಿಧೇಯತೆ ತೋರಿಸುವವರ ವಿನಾ ಅವನು ಯಾರನ್ನೂ ದಾರಿತಪ್ಪಿದವರೆಂದು ತೀರ್ಮಾನಿಸುವುದಿಲ್ಲ. ಅವರು ಅಲ್ಲಾಹನೊಡನೆ ಮಾಡಿದ ಒಡಂಬಡಿಕೆಯನ್ನು ಉಲ್ಲಂಘಿಸುವವರೂ ಒಂದುಗೂಡಿಸಲು ಅಲ್ಲಾಹನು ಆದೇಶಿಸಿರುವುದನ್ನು ಮುರಿಯುವವರೂ ಭೂಮಿಯಲ್ಲಿ ಕಲಹವನ್ನುಂಟು ಮಾಡುವವರೂ ಆಗಿದ್ದಾರೆ. ಅವರೇ ನಷ್ಟಹೊಂದಿದವರು. (ಅಲ್-ಬಖರಃ: 27-28) **(ಸಹಿಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಬಯೋ, 2008 ಪ್ರಕಟಿತ, ಖಾದಿಯಾನ್)**

## ನಾಲಿಗೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು, ಅರ್ಥಹೀನ, ಅಸಂಬದ್ಧ, ಅನುಚಿತ, ಅನಗತ್ಯ ಮಾತುಗಳಿಂದ ದೂರವಿರಬೇಕೆಂದು ಅಲ್ಲಾಹನು ಕಲಿಸಿದ್ದಾನೆ

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಈ ಎಲ್ಲ ಸಂಗತಿಗಳಿಂದ ನಿಜವಾದ ತಖ್ವವಿಲ್ಲದೆ (ಧರ್ಮನಿಷ್ಠೆಯಿಲ್ಲದೆ) ಯಾವುದೇ ಸೌಕರ್ಯ ಮತ್ತು ಸಂತೋಷವು ಸಿಗುವುದಿಲ್ಲ ಎಂದು ತಿಳಿದಿರುವಾಗ, ಜೇಡರ ಬಲೆಯಂತೆ ಹರಡಿರುವ ತಖ್ವದ ಹಲವಾರು ಕ್ಷೇತ್ರಗಳಿವೆ ಅವು ಯಾವುವೂ ಎಂದು ತಿಳಿದುಕೊಳ್ಳಬೇಕು. ತಖ್ವ ಎಲ್ಲಾ ಮನುಷ್ಯನ ಅಂಗಗಳು ಮತ್ತು ಉತ್ತಮ ನೈತಿಕತೆಯುಳ್ಳ ನಾಲಿಗೆಗೆ ಸಂಬಂಧಿಸಿದೆ. ಅತ್ಯಂತ ಸೂಕ್ಷ್ಮವಾದ ವಿಷಯವೆಂದರೆ ನಾಲಿಗೆಯ ವಿಷಯವಾಗಿದೆ. ಕೆಲವೊಮ್ಮೆ ತಖ್ವವನ್ನು ಬಿಟ್ಟು ಒಂದು ವಿಷಯವನ್ನು ಪ್ರಸ್ತಾಪಿಸುತ್ತಾನೆ ಮತ್ತು ಆ ವಿಷಯ ಕೆಟ್ಟದ್ದಾದರೂ ನಾನು ಹೀಗೆ ಹೇಳಿದೆ ಎಂದು ಮನದಲ್ಲಿ ಸಂತೋಷ ಪಡುತ್ತಾನೆ. ಒಬ್ಬ ಮುದುಕನನ್ನು ಓರ್ವ ಲೌಕಿಕ ವ್ಯಕ್ತಿ ಆಹ್ವಾನಿಸಿದ ಒಂದು ಕಥೆ ನನಗೆ ನೆನಪಿದೆ, ಮುದುಕನು ಊಟಕ್ಕೆ ಹೋದಾಗ, ಈ ದುರಹಂಕಾರಿ ವ್ಯಕ್ತಿ ತನ್ನ ಸೇವಕನಿಗೆ ಹೇಳಿದನು, ನಾವು ಮೊದಲ ಹಜ್ಜ್ ಮಾಡಿದ ಸಂದರ್ಭದಲ್ಲಿ ತಂದ ಆ ತಟ್ಟೆಯನ್ನು ತೆಗೆದು ಬಾ, ಮತ್ತೆ ನಾವು ಎರಡನೇಯ ಹಜ್ಜ್ ಮಾಡಿದ ಸಂದರ್ಭದಲ್ಲಿ ತಂದ ಆ ಎರಡನೆಯ ತಟ್ಟೆಯೂ ತೆಗೆದುಕೊಂಡು ಬಾ, ನಂತರ ಹೇಳಿದನು ಮೂರನೇಯ ಹಜ್ಜ್‌ನ ಸಂದರ್ಭದ ತಟ್ಟೆಯನ್ನು ತೆಗೆದುಕೊಂಡು ಬಾ ಎಂದು ಹೇಳಿದನು. ಅದಕ್ಕೆ ಆ ಮುದುಕನು ಹೇಳಿದನು ನೀನು ಬಹಳ ನತದೃಷ್ಟನಾಗಿದ್ದೀಯ: ಈ ಮೂರು ವಾಕ್ಯಗಳಲ್ಲಿ ನೀನು ನಿನ್ನ ಮೂರು ಹಜ್ಜ್‌ಗಳನ್ನು ವ್ಯರ್ಥಗೊಳಿಸಿದೆ. ನೀವು ಮೂರು ಹಜ್ಜ್‌ಗಳನ್ನು ಮಾಡಿದ್ದೀರಿ ಎಂಬ ಅಂಶವನ್ನು ವ್ಯಕ್ತಪಡಿಸಲು ಮತ್ರ ಉದ್ದೇಶಿಸಿದ್ದೀರಿ. ಆದ್ದರಿಂದ ಅಲ್ಲಾಹನು ಬೋಧಿಸಿರುವುದೇನೆಂದರೆ ನಾಲಿಗೆಯನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು ಮತ್ತು ಅರ್ಥಹೀನ, ಅಸಂಬದ್ಧ, ಅನುಚಿತ, ಅನಗತ್ಯ, ಮಾತುಕತೆಗಳನ್ನು ತಪ್ಪಿಸಬೇಕು.

**(ಮಲ್‌ಫೂಝಾತ್, ಸಂಪುಟ-1, ಪುಟ-381, ಪ್ರಕಟಿತ 2018 ಖಾದಿಯಾನ್)**

## ಮಾರ್ಗದರ್ಶನ ಮಾಡುವ ಕೆಲಸವನ್ನು ನಾನೇ ಮಾಡುತ್ತೇನೆ ಎಂದು ಹೇಳುವ ವ್ಯಕ್ತಿ ತಪ್ಪಾಗಿದ್ದಾನೆ

### ಕಲಾಮೆ ಇಲಾಹಿ (ಅಲ್ಲಾಹನ ವಾಕ್ಯ) ವಿಲ್ಲದೆ ಯಶಸ್ವಿ ಜೀವನ ಅಸಾಧ್ಯ

### ಪ್ರಾಣಿಗಳಿಗೂ ಸಹ ದೈವವಾಣಿಯ ಅವಶ್ಯಕತೆಯಿದೆ ಮತ್ತು ಅವುಗಳಿಗೆ ಒಂದು ರೀತಿಯ ದೈವವಾಣಿಯನ್ನು ಬಹಿರಂಗ ಪಡಿಸಲಾಗುತ್ತದೆ, ಅದರ ಪ್ರಮುಖ ಉದಾಹರಣೆಯು ಜೇನುನೊಣದಲ್ಲಿ ಕಂಡುಬರುತ್ತದೆ.

ಸಯ್ಯದುನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ನಹಲ್‌ಮ ಆಯತ್ 70 **ಸುಮ್ಮ ಕುಲೀ ಮಿನ್ ಕುಲ್ಲಿಸ್ಸಮರಾತಿ ಫಸ್‌ಲುಕಿ ಸುಬುಲ ರಬ್ಬಿಕಿ ಝುಲುಲ, ಯಖ್ರುಜು ಮಿಮ್ ಬುತೂನಿಹಾ ಶರಾಬುಮ್ಮುಖ್ತಲಿಫುನ್ ಅಲ್‌ವಾನುಹೂ ಫೀಹೀ ಶಿಫಾಉಲ್ಲಿನ್ನಾಸ್, ಇನ್ನ ಫೀ ಝಾಲಿಕ ಲಆಯತಲ್ಲಿಖೌಮಿಯ್ಯತಫಕ್ಕರೂನ್** ನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ:

ಅದರಲ್ಲಿರುವ ಜೇನುನೊಣದ ಬಗ್ಗೆ ಮತ್ತಷ್ಟು ವಿವರಿಸುತ್ತಾ ಅವರು ಹೇಳಿದರು: ಜೇನುನೊಣವನ್ನು ನಾವು ವಿವಿಧ ಹಣ್ಣುಗಳು ಮತ್ತು ಹೂವುಗಳಿಂದ ಆಹಾರವನ್ನು ತೆಗೆದುಕೊಳ್ಳಬೇಕು ಮತ್ತು ನಾವು ನಿಮ್ಮಲ್ಲಿ ಸೃಷ್ಟಿಸಿದ ಸಾಧನಗಳಿಂದ ಅದನ್ನು ಬಳಸಬೇಕು ಮತ್ತು ದೈವಿಕ ಆಜ್ಞೆಗಳ ಪ್ರಕಾರ ಜೇನುತುಪ್ಪವನ್ನು ತಯಾರಿಸಬೇಕು ಎಂದು ನಾವು ದೈವವಾಣಿಯ ಮೂಲಕ ತಿಳಿಸುತ್ತೇವೆ. ಮತ್ತೆ ಅವರು ಹೇಳುತ್ತಾರೆ: ತದನಂತರ ಜೇನು ಹೊರಬಂದಾಗ ಅದು ವಿವಿಧ ಬಣ್ಣಗಳು ಮತ್ತು ಪ್ರಭೇದಗಳಲ್ಲಿ ಬರುತ್ತದೆ. ಆದರೆ ಎಲ್ಲಾ ರೀತಿಯ ಮತ್ತು ಬಣ್ಣಗಳ ಜೇನುತುಪ್ಪವು ಸಾಮಾನ್ಯವಾಗಿದೆ, ಇದು ಜನರಿಗೆ ಗುಣಪಡಿಸುವ ಕಾರಣವಾಗಿದೆ.

ಇದರಲ್ಲಿ ಮಾನವ ದೈವವಾಣಿಯನ್ನು ಕುರಿತು ಉಲ್ಲೇಖಿಸಲಾಗಿದೆ ಅದೇನೆಂದರೆ ಆ ದೈವವಾಣಿಯು ವಿಭಿನ್ನ ಸಮಯಗಳಲ್ಲಿ ಮತ್ತು ವಿಭಿನ್ನ ಬಣ್ಣಗಳಲ್ಲಿ ಬಹಿರಂಗಗೊಂಡಿದೆ. ಒಬ್ಬ ಪ್ರವಾದಿಯ ಬೋಧನೆಗಳು ಕೆಲವು ವಿಷಯಗಳಲ್ಲಿ

*(ಪುಟ 09ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

## ಪೀರ್ ಮೆಹರ್ ಅಲಿ ಶಾ ಗೋಲ್ಡವಿ ಅವರಿಗೆ ಸೂರಃ ಫಾತಿಹ ತಫ್ಸೀರ್ ಬರೆಯಲು ವೈಭವಯುತ ಪಂಥಾಹ್ವಾನ, ವಿಜಯಿಯಾದ ಪಕ್ಷದಲ್ಲಿ ಐದು ನೂರು ರೂಪಾಯಿಗಳ ನಗದು ಬಹುಮಾನ ನೀಡುವ ವಾಗ್ದಾನ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಅರಬಮೀನ್ ನಂಬ್ರ 4" ರೂಹಾನಿ ಖಝಾಯಿನ್ ಸಂಪುಟ 17 ರಿಂದ ಪ್ರಸ್ತುತಪಡಿಸುತ್ತಿದ್ದೆವು. (1) ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಎಲ್ಲರಿಗಿಂತ ಮೊದಲು ಪೀರ್ ಮೆಹರ್ ಅಲಿ ಶಾ ಗೋಲ್ಡಾವಿ ಅವರಿಗೆ ಒಂದು ಜಲ್ಸಾದಲ್ಲಿ ಉಪಸ್ಥಿತರ ಸಮಕ್ಷಮ ತನ್ನ ಎದುರಿನಲ್ಲಿ ಪವಿತ್ರ ಖುರ್‌ಅನ್‌ನ ಯಾವುದೇ ಅಧ್ಯಾಯದ 40 ವಚನಗಳ ವ್ಯಾಖ್ಯಾನ (ತಫ್ಸೀರ್) ಬರೆಯಲು ಸವಾಲು ಎಸೆದರು. (2) ಅವರು ಒಂದು ಗ್ರಂಥ ತೊಹಫ ಗೋಲ್ಡವಿಯು ರಚಿಸಿದರು. ಅದರಲ್ಲಿ ಅವರು ಮಸೀಹರ ಮೃತ್ಯು ಮತ್ತು ಅವರ ದಾವೆಯ ಪರವಾಗಿ ಸಾಕ್ಷ್ಯಗಳನ್ನು ವಿವರಿಸಿದರು. ಮತ್ತು ಆ ಎಲ್ಲಾ ಸಾಕ್ಷ್ಯಗಳನ್ನು ರದ್ದುಪಡಿಸಲು ಪೀರ್ ಮೆಹರ್ ಅಲಿ ಶಾ ಅವರಿಗೆ ಐವತ್ತು ರೂಪಾಯಿಯ ಬಹುಮಾನ ಇಟ್ಟರು. (3) ಅದಾದ ನಂತರ ಅವರು ಮೂರನೇ ಬಾರಿಗೆ ಪೀರ್ ಮೆಹರ್ ಅಲಿ ಶಾ ಸಾಹಿಬ್ ಅವರಿಗೆ ಒಂದು ಸಾರ್ವಜನಿಕ ಸಭೆಯಲ್ಲಿ ಅವರಿಗೆ ಕರೆ ನೀಡುತ್ತಾ ಹೇಳಿದರು. ಸಾರ್ವಜನಿಕ ಸಭೆಯಲ್ಲಿ ಅವರು ಮೂರು ಗಂಟೆಗಳ ಕಾಲದವರೆಗೆ ತನ್ನ ದಾವೆ ಮತ್ತು ಅದರ ಪುರಾವೆಗಳನ್ನು ಜನರ ಮುಂದೆ ವಿವರಿಸುವೆನು. ಅನಂತರ ಪೀರ್ ಮೆಹರ್ ಅಲಿ ಶಾ ಅವರು ಸಹ ಜನರ ಮುಂದೆ ಮೂರು ಗಂಟೆಯವರೆಗೆ ವಾಸ್ತವದಲ್ಲಿ ಖುರ್‌ಆನ್ ಹದೀಸುಗಳ ಪ್ರಕಾರ ಆಕಾಶದಿಂದ ಮಸೀಹ್(ಅ) ಬರುವವರು ಎಂದು ಸಾಬೀತುಪಡಿಸಲಿ, ಜನರು ನಮ್ಮಿಬ್ಬರ ಭಾಷಣಗಳನ್ನು ಹೋಲಿಸಿಕೊಂಡು ಒಂದು ತೀರ್ಮಾನಕ್ಕೆ ಬರಲಿ. (4) ಅದಾದ ನಂತರ ಅವರು ಪೀರ್ ಮೆಹರ್ ಅಲಿ ಶಾ ಅವರಿಗೆ ಸೂರ: ಫಾತಿಹದ ತಫ್ಸೀರ್ ಬರೆಯಲು ಸವಾಲು ಹಾಕಿದರು. ಅದಕ್ಕಾಗಿ ಅವರು (ಅ) ಐದು ನೂರು ರೂಪಾಯಿಯ ಒಂದು ಭಾರಿ ಬಹುಮಾನ ಅವರಿಗಾಗಿ ನಿಗಧಿಪಡಿಸಿದರು. ಹಿಂದಿನ ಎರಡು ಸಂಚಿಕೆಗಳಲ್ಲಿ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕಡೆಯಿಂದ ನೀಡಲ್ಪಟ್ಟ ಮೇಲೆ ಸವಾಲುಗಳ ಕುರಿತು ಒಂದಿಷ್ಟು ವಿವರ ನೀಡಿರುತ್ತೇವೆ ಇಂದಿನ ಸಂಚಿಕೆಯಲ್ಲಿ ನಾವು ಸೂರಃ ಫಾತಿಹ ತಫ್ಸೀರ್ (ವ್ಯಾಖ್ಯಾನ) ಕುರಿತು ಸವಾಲಿನ ವಿವರ ನೀಡುವೆವು.

### ಪೀರ್ ಮೆಹರ್ ಅಲಿ ಶಾ ಸಾಹಿಬ್ ಅವರಿಗೆ ತನ್ನ ಖುರ್‌ಆನ್‌ನ ಜ್ಞಾನದ ಪೈಕಿ ದೃಢತೆಯಿದ್ದರೆ ನನ್ನ ಎದುರಿನಲ್ಲಿ ಪವಿತ್ರ ಖುರ್‌ಆನ್‌ನ ಯಾವುದೇ ಅಧ್ಯಾಯದ ಅರಬ್ಬಿ ತಫ್ಸೀರ್‌ನ ವಾಕ್ಚಾತುರ್ಯ ಬರೆದು ತೋರಿಸಲಿ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಜಾಹೀರಾತು 15 ಡಿಸೆಂಬರ್ 1900 ರಲ್ಲಿ ಪೀರ್ ಮೆಹರ್ ಅಲಿ ಶಾ ಗೋಲ್ಡಾವಿ ಅವರಿಗೆ ಸೂರಃ ಫಾತಿಹಾದ ತಫ್ಸೀರ್ ಬರೆಯಲು ಸವಾಲು ಹಾಕುತ್ತಾ ನುಡಿದರು.

ಓದುಗರಿಗೆ ತಿಳಿದಿರಬೇಕು. ನಾನು ವಿರೋಧಿ ಮೌಲ್ವಿಗಳಿಗೆ ಸಜ್ಜಾದ ನಶೀನರಿಗೆ ದಿನೇ ದಿನೇ ಧಿಕ್ಕಾರ ಮತ್ತು ಉದ್ದುದ ನಾಲಿಗೆ ಹರಿಬಿಡುವುದನ್ನು ನೋಡಿ ಬಹಳಷ್ಟು ಬೈಗಳನ್ನು ಕೇಳಿ, ಅವರ ಮನವಿಯ ಮೇರೆಗೆ– ನಮಗೆ ಯಾವುದಾದರೊಂದು ದೃಷ್ಟಾಂತವನ್ನು ತೋರಿಸಿ. ಒಂದು ಜಾಹೀರಾತು ಮುದ್ರಿಸಿದ್ದೆ. ಅದರಲ್ಲಿ ಸಂಬೋಧಿಸಿದವರಲ್ಲಿ ಪೀರ್ ಮೆಹರ್ ಅಲಿ ಶಾ ಸಾಹಿಬ್ ವಿಶೇಷ ಸ್ಥಾನ ಪಡೆದಿದ್ದರು. ಆ ಜಾಹೀರಾತಿನ ಸಾರಾಂಶವೇನಿತ್ತೆಂದರೆ–ಇಲ್ಲಿಯವರೆಗೆ ಧಾರ್ಮಿಕ ಚರ್ಚೆಗಳು ಸಾಕಷ್ಟಾಗಿವೆ. ಅದರಿಂದ ವಿರೋಧಿ ಮೌಲ್ವಿಗಳು ಯಾವ ಪಾಠವು ಕಲಿಯಲಿಲ್ಲ. ಹಾಗೆ ಅವರುಗಳು ಯಾವಾಗಲೂ ದೈವಿಕ ದೃಷ್ಟಾಂತಗಳನ್ನು ಕೇಳುತ್ತಿರುತ್ತಾರೆ. ಅದರಿಂದೇನಾದರೂ ಪ್ರಯೋಜನ ಪಡೆದರೆ ಆಶ್ಚರ್ಯವೇನಿಲ್ಲ. ಆದುದರಿಂದ ಈ ಪ್ರಸ್ತಾವನೆ ಮುಂದಿಟ್ಟಿದ್ದೆ. ಪೀರ್ ಮೆಹರ್ ಅಲಿ ಶಾ ಸಾಹಿಬ್ ತನ್ನ ಗುರುಗಳ ಸ್ಥಾನಮಾನದ ಬಗ್ಗೆ ಹೆಮ್ಮೆಪಡುತ್ತಾರೆ ಮತ್ತು ತನ್ನ ಜ್ಞಾನ ಮೇಲೆ ಉತ್ಸಾಹ ತೋರುತ್ತಾ ಅವರು ನನಗೆ ಅವಿಶ್ವಾಸಿ ಎಂಬ ಫತ್ವಾ ನೀಡಿದ್ದಾರೆ ಮತ್ತು ಜನರ ದಿಕ್ಕು ತಪ್ಪಿಸಲು ನನ್ನನ್ನು ಧಿಕ್ಕರಿಸಲು ಒಂದು ಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿ ಅವರು ತನ್ನ ಜ್ಞಾನದ ಉನ್ನತ ಮಟ್ಟದ ಬಗ್ಗೆ ಹೆಮ್ಮೆಪಡುತ್ತಾ ನನ್ನ ಪೈಕಿ ಒತ್ತು ನೀಡಿದರು. ಈ ವ್ಯಕ್ತಿ ಖುರ್‌ಆನ್ ಮತ್ತು ಹದೀಸಿನ ಜ್ಞಾನದಿಂದ ದೂರವಾಗಿದ್ದಾನೆ. ಹೀಗೆ ಜನರಿಗೆ ನನ್ನ ಪೈಕಿ ವಿರುದ್ಧಾತ್ಮಕ ಉತ್ತೇಜನ ನೀಡಿದರು. ಮತ್ತು ಖುರ್‌ಆನ್‌ನ ಜ್ಞಾನದ ಕುರಿತು ದಾವೆ ಸಾರಿದರು ಅವರ ಈ ದಾವೆ ನಿಜವಾಗಲೂ ಸತ್ಯವಾಗಿದ್ದರೆ, ಅವರಿಗೆ ದೇವಗ್ರಂಥದ ರಹಸ್ಯಗಳನ್ನು ದಯಪಾಲಿಸಲಾಗಿದ್ದರೆ ಅವರ ಅನುಯಾಯಿಯಾಗಲು ಯಾರಿಗೆ ಹೇಗೆ ಆತಂಕವಾಗುವುದು. ಖುರ್‌ಆನ್ ಜ್ಞಾನದಿಂದ ನಿಸ್ಸಂಶಯವಾಗಿಯೂ ಸಜ್ಜನರಾಗುವುದು ಮತ್ತು ಸತ್ಯವಾದಿಯಾಗುವುದು ಸಾಬೀತಾಗುತ್ತದೆ. ಏಕೆಂದರೆ **"ಲಾ ಯಮುಸ್ಸುಹು ಇಲ್ಲಲ್ ಮುತಹರೂನ್**, ಕೇವಲ ಸತ್ಪುರುಷರಿಗಷ್ಟೇ ದೇವಗ್ರಂಥದ ಜ್ಞಾನ ನೀಡಲಾಗುತ್ತದೆ. ಆದರೆ ಕೇವಲ ದಾವೆಯಿಂದ ಸಾಬೀತಾಗುವುದಿಲ್ಲ ಬದಲು ಎಲ್ಲಾದರೂ ಪರೀಕ್ಷೆ ಎಂಬುದಿರುತ್ತದೆ. ಪರೀಕ್ಷೆಯ ಮಾಧ್ಯಮ ಸ್ಪರ್ಧೆಯಾಗಿದೆ. ಏಕೆಂದರೆ ಅಂಧರ ಪ್ರಕಾಶದಿಂದಲೇ ಗುರುತಿಸಲ್ಪಡುತ್ತದೆ. ಅಂದಹಾಗೆ ನನಗೆ ಅಲ್ಲಾಹನು ತನ್ನ ದಿವ್ಯವಾಣಿಯಿಂದ ಅನುಗ್ರಹಿಸಿದ್ದಾನೆ, **ಅರ್‌ರಹ್ಮಾನ್ ಅಲ್ಲಮಲ್ ಖುರ್‌ಆನ್**, ಅಲ್ಲಾಹನು ನಿನಗೆ ಖುರ್‌ಆನ್‌ನ್ನು ಕಲಿಸಿದ್ದಾನೆ. ಆದುದರಿಂದ ನನ್ನ ಸತ್ಯ ಅಥವ ಅಸ್ಯ ಪರೀಕ್ಷಿಸಲು, ಈ ದೃಷ್ಟಾಂತ ಸಾಕಾಗುವುದು ಪೀರ್ ಮೆಹರ್ ಅಲಿ ಶಾ ಸಾಹಿಬ್ ನನ್ನ ಎದುರಿನಲ್ಲಿ ಪವಿತ್ರ ಖುರ್‌ಆನ್‌ನ ಯಾವುದೇ ಅಧ್ಯಾಯದ ಅರಬ್ಬಿಯಲ್ಲಿ ವಾಕ್ಚಾತುರ್ಯ ಪೂರ್ಣ ತಫ್ಸೀರ್ ಬರೆಯಲಿ. ಅವರು ಅದರ ಮೇಲೆ ಮೇಲುಗೈ ಅಥವಾ ವಿಜಯ ಸಾದಿಸಿದರೆ ನನಗೆ ಅವರ ಸಜ್ಜನಿಕೆ ಮನ್ನಿಸುವುದರಲ್ಲಿ ಯಾವ ಆತಂಕವಿರುವುದಿಲ್ಲ.

### ಪೀರ್ ಮೆಹರ್ ಅಲಿ ಶಾ ಸ್ಪರ್ಧಾ ಮೈದಾನದಿಂದ ಪರಾರಿಯಾದ

ಹಾಗೆ ನಾನು ಈ ಕಾರ್ಯವನ್ನು ನಿರ್ಣಯಿಸಿ ಅವರಿಗೆ ಆಹ್ವಾನ ನೀಡುತ್ತಾ ಜಾಹೀರಾತು ಮುದ್ರಿಸಿದ್ದೆ. ಅದರಲ್ಲಿ ಒಳ್ಳೆಯ ನಿಯತ್ತನ್ನು ತೋರಿಸಲಾಗಿತ್ತು. ಆದರ ಬದಲಾಗಿ ಅವರು ಯಾವ ನಡೆಯನ್ನು ತೋರಿದರೆಂದು ಅದರಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಅವರಿಗೆ ಪವಿತ್ರ ಖುರ್‌ಆನ್‌ನ ಯಾವ ಜ್ಞಾನವು ಇಲ್ಲ. ಅಂದರೆ ಅವರು ಸ್ಪಷ್ಟವಾಗಿ ತಳ್ಳಿ ಹಾಕಿದರು ಮತ್ತು ಪರಾರಿಯ ಮಾರ್ಗ ಹಿಡಿದರು. ಗೊಂದಲಕಾರಿ ನಡೆಯಂತೆ ಹೀಗೊಂದು ಜಾಹೀರಾತು ಪ್ರಕಟಪಡಿಸಿದರು. "ಮೊದಲು ನನ್ನಿಂದ ಹದೀಸ್ ಮತ್ತು ಖುರ್‌ಅನ್‌ನ ಮೂಲಕ ತನ್ನ ವಿಶ್ವಾಸಗಳ ಬಗ್ಗೆ ನಿರ್ಣಯಿಸಿಕೊಳ್ಳಲಿ. ಮೌಲ್ವಿ ಮುಹಮ್ಮದ್ ಹುಸೇನ್ ಮತ್ತು ಅವರ ಸಂಗಡಿಗರು ಹೇಳಲಿ. ಮೆಹರ್ ಅಲಿ ಶಾ ಅವರ ವಿಶ್ವಾಸಗಳು ಸರಿಯಾಗಿವೆ ಮತ್ತು ತಡವಿಲ್ಲದೇ ಅದೇ ಸಮಯ ನನ್ನ ಬೈಅತ್ ಮಾಡಲಿ. ಬೈಅತ್ ನಂತರ ಅರಬ್ಬಿ ತಫ್ಸೀರ್ ಬರೆಯಲು ಸಹ ಅನುಮತಿ ನೀಡಲಾಗುವುದು." ನನಗೆ ಅವರ ಈ ಉತ್ತರ ಓದಿ ಅವರ ಸ್ಥಿತಿಯ ಮೇಲೆ ಅಳು ಬಂತು. ಮತ್ತು ಅವರ ಮೇಲೆ ಸತ್ಯಾನ್ವೇಷಣೆಯ ಯಾವ ಭರವಸೆ ಇತ್ತು ಅದು ಮಣ್ಣುಮುಕ್ಕಿದಂತಾಯಿತು.

### ಕಳ್ಳತನ ಮತ್ತು ಅದರ ಮೇಲೆ ಗರ್ವ

ಈಗ ಈ ಜಾಹೀರಾತು ಬರೆಯುವ ಉದ್ದೇಶ ನಮಗೆ ಅವರ ಮೇಲೆ ಭರವಸೆ ಉಳಿದಿದೆ ಎಂದಲ್ಲ. ಬದಲು ಆ ಸಮಸ್ಯೆ ತಲೆದೋರಿ ಎರಡು ತಿಂಗಳಿಗಿಂತ ಹೆಚ್ಚು ಸಮಯ ಕಳೆಯಿತು. ಆದರೆ ಇಲ್ಲಿಯವರೆಗೂ ಸಂಬಂಧಿತರ ಹಿಂಸೆ ಬಲಾತ್ಕಾರ ತಪ್ಪಲಿಲ್ಲ. ವಾರದಲ್ಲಿ ಒಮ್ಮೆ ಏನಾದರೊಂದು ಜಾಹೀರಾತು ಬಂದುಬಿಡುತ್ತದೆ. ಅದರಲ್ಲಿ ಪೀರ್ ಮೆಹರ್ ಅಲಿ ಶಾ ಅವರನ್ನು ಆಕಾಶಕ್ಕೇರಿಸಿರುತ್ತಾರೆ. ಮತ್ತು ನನ್ನ ಬಗ್ಗೆ ಬೈಗುಳಗಳಿಂದ ಕಾಗದ ತುಂಬಿರುತ್ತದೆ ಹೀಗೆ ಜನರಿಗೆ ದಿಕ್ಕು ತಪ್ಪಿಸುತ್ತಿದ್ದಾರೆ. ನನ್ನ ಬಗ್ಗೆ ಹೇಳುತ್ತಾರೆ. ನೋಡಿರಿ ಈ ವ್ಯಕ್ತಿ ಎಷ್ಟೊಂದು ದುಷ್ಕರ್ಮ ಮಾಡಿದ್ದಾನೆ? ಪೀರ್ ಮೆಹರ್ ಅಲಿ ಶಾ ಸಾಹಿಬರಂತಹ ಪವಿತ್ರ ಮನುಷ್ಯರು ಅವರ ಎದುರಿನಲ್ಲಿ ತಫ್ಸೀರ್ ಬರೆಯಲು ಕಷ್ಟಗಳನ್ನು ಸಹಿಸಿ ಲಾಹೋರ್ ತಲುಪಿದ್ದಾರೆ. ಆದರೆ ಆ ವ್ಯಕ್ತಿ ಈ ಮಾತನ್ನು ತಿಳಿದು ಸಹ ತನ್ನ ಮನೆಯ ಒಂದು ಕೊಠಡಿಯಲ್ಲಿ ಅಡಗಿ ಕುಳಿತುಕೊಂಡಿದ್ದಾನೆ. ಅವರು ಬರುತ್ತಿದ್ದರೆ ನನ್ನಿಂದ ಅರಬ್ಬಿಯಲ್ಲಿ ಖುರ್‌ಆನ್‌ನ ಸಾಕ್ಷ್ಯಗಳನ್ನು ಪಾಂಡಿತ್ಯವನ್ನು ತೋರಿಸುವ ದೃಷ್ಟಾಂತ ಬಹಿರಂಗವಾಗುತಿತ್ತು.

### ಸೂರಃ ಫಾತಿಹ ಬರೆಯಲು ವೈಭವಯುತ ಸವಾಲು

ಹಾಗೆ ಇಂದು ನನ್ನ ಹೃದಯದಲ್ಲಿ ಒಂದು ಸಲಹೆ ಅಲ್ಲಾಹನು

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಲ್ಲಾಹನು ನಿಮಗಾಗಿ ಕಿಡಿಗೇಡಿಗಳ ಗುಂಪುಗಳನ್ನು ಒಂದೇ ಕಡೆ ಒಟ್ಟುಸೇರಿಸಿದನು ಮತ್ತು ಯುದ್ಧವನ್ನು ಸಮುದ್ರದ ಸಮೀಪಕ್ಕೆ ತಂದನು. ಅವನು ಮೊದಲು ನೆಲದಲ್ಲಿ ನಿಮಗೆ ತನ್ನ ಗುರುತುಗಳನ್ನು (ದೃಷ್ಟಾಂತಗಳನ್ನು) ತೋರಿಸಿರುವನು. ಈ ದೃಷ್ಟಾಂತಗಳ ಮೂಲಕ ನೀವು ಸಮುದ್ರದಲ್ಲೂ ಪಾಠ ಕಲಿಯಲು ಅವನು ಹಾಗೆ ಮಾಡಿದ್ದಾನೆ. ನೀವು ನಿಮ್ಮ ಶತ್ರುಗಳ ಬಳಿಗೆ ಹೋಗಿರಿ. ಸಮುದ್ರವನ್ನು ದಾಟುತ್ತಾ ಅವರ ಕಡೆಗೆ ಧಾವಿಸಿರಿ. ಏಕೆಂದರೆ ಅಲ್ಲಾಹನು ಅವರನ್ನು ನಿಮಗಾಗಿ ಒಂದು ಕಡೆ ಒಟ್ಟು ಸೇರಿಸಿದ್ದಾನೆ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಮುಸ್ಲಿಹ್ ಮೌಊದ್(ರ)ರವರ ವ್ಯಾಖ್ಯಾನದ ಬೆಳಕಿನಲ್ಲಿ ಹಝ್ರತ್ ಮುಸಾ(ಅ)ರವರ ಹಿಜ್ರತ್‌ನ ಸಂದರ್ಭದಲ್ಲಿ ಸಮುದ್ರವನ್ನು ಸೀಲಲ್ಪಟ್ಟ ಪವಾಡದ ಕುರಿತು ವಿವರಾತ್ಮಕ ಪ್ರಸ್ತಾವನೆ**

**ಬಹ್‌ರೈನ್ ಮತ್ತು ಯಮನ್‌ನ ಪ್ರದೇಶಗಳಲ್ಲಿ ಮುಸ್ಲಿಮರ ಸೈನ್ಯದ ಧರ್ಮತ್ಯಾಗಿಗಳ ವಿರುದ್ಧ ಪಡೆದ ವೈಭವಯುತ ವಿಜಯಗಳ ಕುರಿತು ವಿವರಾತ್ಮಕ ಪ್ರಸ್ತಾವನೆ**

**ಸನ್ಮಾನ್ಯ ಡೇಕೋ ಝಕರಿಯಾ ಸಾಹಿಬ್, ಸನ್ಮಾನ್ಯ ಡೇಕೋ ಮೂಸಾ ಸಾಹಿಬ್,ಉಮರ್ ಕೋಟ್ ಜಿಲ್ಲೆಯ ಸಾದಿಕ್ ಗ್ರಾಮದ ಮುಕರ್‌ರಂ ಮುಹಮ್ಮದ್ ಯೂಸುಫ್ ಬಲೋಚ್ ಸಾಹಿಬ್, ರಬ್ವದ ವಖ್ಫೇ ನೌ ಆದ ಸನ್ಮಾನ್ಯ ಮುಬಾರಿಝ ಫಾರೂಖ್ ಸಾಹಿಬ, ಐವರಿಕೋಸ್ಟಿನ ಮಾಸಾದಾಗೋ ಪ್ರದೇಶದ ಲೋಕಲ್ ಮುಅಲ್ಲಿಂ ಆದ ಸನ್ಮಾನ್ಯ ಆನ್‌ಝೂ ಮಾನಾ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01–07–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ - اَلرَّحْمٰنِ الرَّحِيمِ - مٰلِكِ يَوْمِ الدِّينِ

إِيَّاكَ نَعْبُدُ وَإِيَّاكَ نَسْتَعِينُ - اِهْدِنَا الصِّرَاطَ الْمُسْتَقِيمَ -

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ -

ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಕಾಲದಲ್ಲಿ ಧರ್ಮತ್ಯಾಗಿಗಳಾದ ದಂಗೆಗಾರರ ವಿರುದ್ಧ ಕಾರ್ಯಾಚರಣೆಗಳ ಪ್ರಸ್ತಾಪ ನಡೆಯುತ್ತಿತ್ತು. ಈ ಸಂಬಂಧವಾಗಿ ಒಂಬತ್ತನೇ ಕಾರ್ಯಾಚರಣೆಯ ಕುರಿತು ಪ್ರಸ್ತಾಪಿಸುತ್ತಿದ್ದೆ. ಅದು ಬಹ್ರೈನಿದ್ದಾಗಿತ್ತು. ಇದರ ಬಗ್ಗೆ ವಿವರಣೆ ಲಭಿಸುತ್ತದೆ. ಹಝ್ರತ್ ಅಲಾಅ್(ರ) ಹಝ್ರತ್ ಜಾರೂದ್(ರ)ರಿಗೆ ಹೀಗೆ ಆದೇಶ ಕಳುಹಿಸಿದರು: ನೀವು ಅಬ್ದುಲ್‌ಖೈಸ್ ಗೋತ್ರದ ಜೊತೆಗೆ ಹುತಮ್‌ನನ್ನು ಎದುರಿಸಲು ಹಜರ್‌ನ ಸುತ್ತ ಇರುವ ಪ್ರದೇಶಕ್ಕೆ ಹೋಗಿ ಡೇರೆ ಹಾಕಿರಿ. ಅನಂತರ ಹಝ್ರತ್ ಅಲಾಅ್(ರ) ಕೂಡ ತನ್ನ ಸೈನ್ಯದೊಂದಿಗೆ ಹುತಮ್‌ನನ್ನು ಎದುರಿಸಲು ಆ ಪ್ರದೇಶಕ್ಕೆ ಹೋದರು. ಅಹ್ಲೇ ದಾರೈನ್ ಹೊರತುಪಡಿಸಿ ಎಲ್ಲ ಮುಶ್ರಿಕರು ಹುತಮಿನ ಬಳಿ ಒಟ್ಟುಸೇರಿದರು. ಅದೇ ರೀತಿಯಲ್ಲಿ ಎಲ್ಲ ಮುಸ್ಲಿಮರು ಹಝ್ರತ್ ಅಲಾಅ್ ಬಿನ್ ಹಝ್ರಮಿ(ರ)ರ ಬಳಿ ಒಟ್ಟುಸೇರಿದರು. ಇಬ್ಬರೂ ತಮ್ಮ ತಮ್ಮ ಮುಂದೆ ಒಂದು ಹೊಂಡವನ್ನು (ಕಂದಕವನ್ನು) ಅಗೆದರು. ಅವರು ದಿನಾಲೂ ತಮ್ಮ ಹೊಂಡವನ್ನು ದಾಟಿಕೊಂಡು ಶತ್ರುಗಳ ಮೇಲೆ ಆಕ್ರಮಣ ನಡೆಸುತ್ತಿದ್ದರು ಮತ್ತು ಯುದ್ಧದ ನಂತರ ಪುನಃ ಹೊಂಡವನ್ನು ದಾಟಿ ಹಿಂದೆ ಬರುತ್ತಿದ್ದರು. ಒಂದು ತಿಂಗಳ ತನಕ ಯುದ್ಧದ ಸ್ಥಿತಿ ಇದೇ ಆಗಿತ್ತು. ಅದರ ನಡುವೆ ಒಂದು ರಾತ್ರಿ ಶತ್ರುಗಳು ತಂಗಿದ್ದ ಸ್ಥಳದಿಂದ ಜೋರಾದ ಬೊಬ್ಬೆ ಮುಸ್ಲಿಮರಿಗೆ ಕೇಳಿಬಂತು. ಶತ್ರುಗಳಿಗೆ ಏನಾಯಿತು ಎಂಬ ಮಾಹಿತಿಯನ್ನು ಯಾರಾದರೂ ಪಡೆದುಕೊಂಡು ಬರುತ್ತೀರಾ ಎಂದು ಹಝ್ರತ್ ಅಲಾಅ್(ರ) ಕೇಳಿದರು. ನಾನು ಈ ಕೆಲಸಕ್ಕಾಗಿ ಹೋಗುತ್ತೇನೆ ಎಂದು ಹಝ್ರತ್ ಅಬ್ದುಲ್ಲಾಹ್ ಬಿನ್ ಹಧ್‌ಫ್(ರ) ಹೇಳಿದರು. ನಮ್ಮ ಶತ್ರುಗಳು ಶರಾಬು ಕುಡಿದು ಮದೋನ್ಮತ್ತರಾಗಿ ಬೊಬ್ಬೆ ಹಾಕುತ್ತಿದ್ದಾರೆ. ಈ ಎಲ್ಲ ಗದ್ದಲ ಅದರದ್ದೇ ಆಗಿದೆ ಎಂದು ಅಬ್ದುಲ್ಲಾಹ್ ಬಿನ್ ಹಧ್‌ಫ್(ರ) ಮರಳಿ ಬಂದು ಮಾಹಿತಿ ನೀಡಿದರು.

ಇದನ್ನು ಕೇಳಿದಾಗ ಮುಸ್ಲಿಮರು ತಕ್ಷಣವೇ ಶತ್ರುಗಳ ಮೇಲೆ ದಾಳಿ ನಡೆಸಿ ಅವರು ತಂಗಿದ ಸ್ಥಳಕ್ಕೆ ನುಗ್ಗಿಕೊಂಡು ಅವರನ್ನು ತಡಮಾಡದೇ ವಧಿಸಲು ಶುರುಮಾಡಿದರು. ಶತ್ರುಗಳು ತಮ್ಮ ಕಂದಕಗಳ (ಹೊಂಡಗಳ) ಕಡೆಗೆ ಓಡಿಹೋದರು. ಅನೇಕರು ಅದರಲ್ಲಿ ಬಿದ್ದು ಪ್ರಾಣಬಿಟ್ಟರು. ಕೆಲವರು ಪರಾರಿಯಾದರು, ಕೆಲವರು ಗಾಬರಿಗೊಂಡರು ಮತ್ತು ಕೆಲವರನ್ನು ವಧಿಸಲಾಯಿತು ಅಥವಾ ಬಂಧಿಸಲಾಯಿತು. ಮುಸ್ಲಿಮರು ಅವರ ತಂಗುದಾಣದಲ್ಲಿದ್ದ ಎಲ್ಲ ವಸ್ತುಗಳನ್ನು ವಶಪಡಿಸಿಕೊಂಡರು. ಪರಾರಿಯಾದವರು ತಮ್ಮ ದೇಹಗಳಲ್ಲಿ ಇದ್ದ ವಸ್ತುವನ್ನು ಮಾತ್ರ ತೆಗೆದುಕೊಂಡು ಹೋಗಲು ಸಾಧ್ಯವಾಯಿತು. ಅಬ್ಜರ್ ಜೀವ ಉಳಿಸಿ ಪರಾರಿಯಾದನು.

ದೇಹದಲ್ಲಿ ಜೀವವೇ ಇಲ್ಲದಂತಾಗಿತ್ತು ಹುತಮಿನ ಭಯ ಮತ್ತು ಗಾಬರಿಯ ಸ್ಥಿತಿ. ಅವನು ತನ್ನ ಕುದುರೆಯ ಬಳಿಗೆ ಹೋದನು. ಅಷ್ಟರಲ್ಲಿ ಮುಸ್ಲಿಮರು ಮುಶ್ರಿಕರ ಸ್ಥಳಕ್ಕೆ ಬಂದಾಗಿತ್ತು. ಹುತಮನು ಮೂರ್ಛೆ ಹೋದಂತಹ ಸ್ಥಿತಿಯಲ್ಲಿ ಮುಸ್ಲಿಮರಿಂದ ಪರಾರಿಯಾಗಿ ಕುದುರೆಯ ಮೇಲೆ ಸವಾರನಾಗಲು ಹೋದನು. ಅವನು ರಿಕಾಬ್‌ನಲ್ಲಿ ಪಾದವನ್ನು ಇಟ್ಟ ಕೂಡಲೇ ಅದು ಮುರಿದು ಹೋಯಿತು. ಹಝ್ರತ್ ಖೈಸ್ ಬಿನ್ ಆಸಿಮ್(ರ) ಅವನನ್ನು ವಧಿಸಿದರು. ಮುಶ್ರಿಕರ ತಂಗುದಾಣದ ಪ್ರತಿಯೊಂದು ವಸ್ತುವನ್ನು ವಶಪಡಿಸಿದ ನಂತರ ಮುಸ್ಲಿಮರು ಅವರ ಕಂದಕದಿಂದ ಹೊರಟು ಮುಶ್ರಿಕರನ್ನು ಹಿಂಬಾಲಿಸಲು ಹೋದರು. ಹಝ್ರತ್ ಖೈಸ್ ಬಿನ್ ಆಸಿಂ(ರ) ಅಬ್ಜರಿನ ಸಮೀಪಕ್ಕೆ ತಲುಪಿದರು. ಆದರೆ ಅಬ್ಜರಿನ ಕುದುರೆ ಹಝ್ರತ್ ಖೈಸಿನ ಕುದುರೆಗಿಂತ ಹೆಚ್ಚು ಶಕ್ತಿಶಾಲಿಯಾಗಿತ್ತು. ಅಬ್ಜರ್ ಕೈಯಿಂದ ತಪ್ಪಿಸುವನೋ ಎಂಬ ಸಂಶಯದಿಂದ ಅವರು ಅಬ್ಜರಿನ ಕುದುರೆಯ ಬೆನ್ನಿಗೆ ಈಟಿಯನ್ನು ಎಸೆದರು. ಇದರಿಂದ ಕುದುರೆ ಗಾಯಾಳು ಆಯಿತು. ಹೇಗಿದ್ದರೂ ಅಬ್ಜರ್ ಓಡಿ ಪರಾರಿಯಾದನು. ಅವನನ್ನು ಹಿಡಿಯಲು ಸಾಧ್ಯವಾಗಲಿಲ್ಲ. (ತಾರೀಖ್ ಅತ್ತಬರಿ, ಸಂಪುಟ–2, ಪುಟ–288–289, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012) (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–227, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ಕಿತಾಬುರ್ರಿದ ಲಿಲ್‌ವಾಖಿದಿ, ಪುಟ–163, ದಾರುಲ್ ಗರ್ಬ್ ಅಲ್‌ಇಸ್ಲಾಮಿ 1990)

ಬೆಳಿಗ್ಗೆ ಹಝ್ರತ್ ಅಲಾಅ್(ರ) ಯುದ್ಧ ಸಂಪತ್ತನ್ನು ಯೋಧರಿಗೆ ವಿತರಿಸಿ ಕೊಟ್ಟರು. ಯುದ್ಧದಲ್ಲಿ ವಿಶೇಷವಾದ ಶೌರ್ಯವನ್ನು ತೋರಿಸಿದ ಸೈನಿಕರಿಗೆ ಮೃತಪಟ್ಟ ಸರದಾರರ ಬೆಲೆಬಾಳುವ ಬಟ್ಟೆಗಳನ್ನು ಕೊಟ್ಟರು. ಅಂಥವರಲ್ಲಿ ಹಝ್ರತ್ ಅಫೀಫ್ ಬಿನ್ ಮುಂಧಿರ್(ರ), ಹಝ್ರತ್ ಖೈಸ್ ಬಿನ್ ಆಸಿಮ್(ರ) ಮತ್ತು ಹಝ್ರತ್ ಸಮಾಮ ಬಿನ್ ಉಸಾಲ್(ರ) ಸೇರುತ್ತಾರೆ.

ಹುತಮ್ ಬಹಳ ಗರ್ವದಿಂದ ಧರಿಸಿ ನಡೆದಾಡುತ್ತಿದ್ದ ಅಮೂಲ್ಯ ಅಲಂಕಾರವನ್ನು ಹೊಂದಿದ್ದ ಒಂದು ಕಪ್ಪು ಬಣ್ಣದ ಬಟ್ಟೆಯು ಹಝ್ರತ್ ಸಮಾಮ(ರ)ರಿಗೆ ನೀಡಲಾದ ವಸ್ತ್ರಗಳಲ್ಲಿ ಇತ್ತು.

ಈ ಕಾರ್ಯಾಚರಣೆಯ ವಿಜಯದ ಮಾಹಿತಿ ಪತ್ರದ ಮೂಲಕ ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಲಾಯಿತು. ಪತ್ರದಲ್ಲಿ ಹೀಗೆ ಬರೆದರು: ಅಲ್ಲಾಹನು ನಮ್ಮ ಶತ್ರುಗಳ ಬುದ್ಧಿಯನ್ನು ಕೆಡಿಸಿದ್ದಾನೆ. ಅವರು ಬೆಳಿಗ್ಗಿನ ಸಮಯದಲ್ಲಿ ಕುಡಿದಿದ್ದ ಶರಾಬಿನ ಕಾರಣದಿಂದ ಅವರ ಶಕ್ತಿ ಕೊನೆಗೊಂಡಿದೆ. ನಾವು ಕಂದಕವನ್ನು ಪಾರು ಮಾಡಿ ಅವರೊಳಗೆ ನುಗ್ಗಿದೆವು. ಅವರು ಮದೋನ್ಮತ್ತರಾಗಿದ್ದರು. ಕೆಲವರನ್ನು ಹೊರತುಪಡಿಸಿ ಉಳಿದ ಎಲ್ಲರನ್ನು ನಾವು ವಧಿಸಿದೆವು. ಅಲ್ಲಾಹನು ಹುತಮನನ್ನು ಕೂಡ ವಧಿಸಿದನು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–290–291, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಜರ್ ಮತ್ತು ಅದರ ಸುತ್ತಮುತ್ತ ಇರುವ ಪ್ರದೇಶಗಳನ್ನು ಹಝ್ರತ್ ಅಲಾಅ್(ರ) ವಶಪಡಿಸಿಕೊಂಡರು. ಆದರೆ ಸ್ಥಳೀಯರಾದ ಅನೇಕ ಇರಾನಿಯರು ಹೊಸ ಆಡಳಿತವನ್ನು ವಿರೋಧಿಸುತ್ತಿದ್ದರು. ಬೇಗನೇ ಹಜರ್‌ನಲ್ಲಿ ಮದೀನದ ಆಡಳಿತ ಕೊನೆಗೊಳ್ಳುವುದು ಹಾಗೂ ಮಫ್‌ರೂಖ್ ಶೈಬಾನಿ ತನ್ನ ತಗ್‌ಲಬ್ ಮತ್ತು ನಮಿರ್‌ನ ಸೇನೆಗಳೊಂದಿಗೆ ಬರುತ್ತಿದ್ದಾನೆ ಎಂಬ ವದಂತಿಯನ್ನು ಹರಡಿಕೊಂಡು ಅವರಲ್ಲಿ ಅನೇಕರು ಜನರ ನಡುವೆ ಭೀತಿ ಹುಟ್ಟಿಸುತ್ತಿದ್ದರು. ಈ ಸಂಗತಿ ಹಝ್ರತ್ ಅಬೂಬಕರ್(ರ)ರಿಗೆ ಗೊತ್ತಾದಾಗ ಅವರು ಹಝ್ರತ್ ಅಲಾಅ್(ರ)ರಿಗೆ ಹೀಗೆ ಪತ್ರ ಬರೆದರು: ಬನೂ ಶೈಬಾನ್ ಬಿನ್ ಸಅ್‌ಲಬ ನಿಮ್ಮ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂದು ಕಿಡಿಗೇಡಿಗಳು ಹರಡಿಸುತ್ತಿರುವ ಸುದ್ದಿ ತನಿಖೆಯಿಂದ ಸರಿಯೆಂದು ತಿಳಿದುಬಂದರೆ, ಅವರನ್ನು ದಮನಿಸಲಿಕ್ಕಾಗಿ ಸೈನ್ಯವನ್ನು ಕಳುಹಿಸಿರಿ. ಅವರನ್ನು ತುಳಿದುಹಾಕಿರಿ ಮತ್ತು ಅವರ ಹಿಂದೆ ಇರುವ ಗೋತ್ರಗಳು ಎಂದಿಗೂ ತಲೆಯೆತ್ತದ ರೀತಿಯಲ್ಲಿ ಅವರನ್ನು ಭಯಪಡಿಸಿರಿ.
(ಹಝ್ರತ್ ಅಬೂಬಕರ್(ರ) ಕೆ ಸರ್ಕಾರಿ ಖುತೂತ್, ಪುಟ–49, ಇದಾರ ಇಸ್ಲಾಮಿಯಾತ್ ಲಾಹೋರ್) (ತಾರೀಖ್ ಅತ್ತಬರಿ, ಸಂಪುಟ–2, ಪುಟ–291, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ದಾರೈನಿನ ಧರ್ಮತ್ಯಾಗಿಗಳು ಇರಾನಿನ ಕೊಲ್ಲಿ ದ್ವೀಪದಲ್ಲಿ ಒಟ್ಟುಸೇರಿದರು.

ಹಝ್ರತ್ ಅಲಾಅ್(ರ)ರಿಂದ ಪರಾಜಿತಗೊಂಡ ನಂತರ ಪರಾಜಿತರಾದ ದಂಗೆಗಾರರ ಒಂದು ದೊಡ್ಡ ಭಾಗ ದೋಣಿಗಳಲ್ಲಿ ಕುಳಿತುಕೊಂಡು ದಾರೈನಿಗೆ ಹೋದರು. ಇತರ ಜನರು ತಮ್ಮ ತಮ್ಮ ಗೋತ್ರಗಳ ಪ್ರದೇಶಗಳಿಗೆ ಮರಳಿ ಹೋದರು. ಬಹ್‌ರೈನಿನಲ್ಲಿ ಪಿತೂರಿಯ ಬೆಂಕಿ ನಂದಿಸುವುದರಲ್ಲಿ ಮುಸನ್ನ ಬಿನ್ ಹಾರಿಸ್(ರ)ರ ಬಹಳ ಹಿರಿದಾದ ಪಾತ್ರವಿತ್ತು. ಅವರು ತನ್ನ ಸೈನ್ಯದೊಂದಿಗೆ ಹಝ್ರತ್ ಅಲಾಅ್ ಬಿನ್ ಹಝ್ರಮಿಗೆ ನೆರವಾದರು ಮತ್ತು ಬಹ್‌ರೈನಿನ ಉತ್ತರ ದಿಕ್ಕಿನ ಕಡೆಗೆ ಹೊರಟರು ಹಾಗೂ ಖತೀಫ್ ಮತ್ತು ಹಜರನ್ನು ವಶಪಡಿಸಿಕೊಂಡರು. ಬಹ್‌ರೈನಿನ ಧರ್ಮತ್ಯಾಗಿಗಳಿಗೆ ನೆರವಾಗಿದ್ದ ಇರಾನಿನ ಸೈನಿಕರ ಮತ್ತು ಅವರ ಅಧಿಕಾರಿಗಳ ಮೇಲೆ ವಿಜಯ ಸಾಧಿಸುವ ತನಕ ಅವರು ತಮ್ಮ ಕಾರ್ಯದಲ್ಲಿ ನಿರತರಾದರು. ಹಝ್ರತ್ ಅಲಾಅ್(ರ) ಆಗಲೂ ಮುಶ್ರಿಕರ ಸೈನ್ಯದಲ್ಲೇ ತಂಗಿದ್ದರು. ಅವರಿಗೆ ಬನೂ ಬಕರ್ ಬಿನ್ ವಾಯಿಲ್‌ರಿಗೆ ಬರೆದ ಪತ್ರಗಳಿಗೆ ಉತ್ತರವಾಗಿ ಅವರು ಬಯಸುತ್ತಿದ್ದ ಸುದ್ದಿ ಲಭಿಸಿತು. ಎಂದರೆ ಅವರು ಮುಸ್ಲಿಮರಾಗಿರುವರು, ಅವರು ದಂಗೆ ಮಾಡುತ್ತಿಲ್ಲ, ಯುದ್ಧ ಮಾಡುತ್ತಿಲ್ಲ ಎಂಬ ಸುದ್ದಿ ಲಭಿಸಿತು. ತಾನು ಮರಳಿ ಹೋದ ನಂತರ ಬಹ್‌ರೈನಿನ ನಿವಾಸಿಗಳಲ್ಲಿ ಯಾರಿಂದಲೂ ಯಾವುದೇ ಅಹಿತಕರ ಘಟನೆ ನಡೆಯದು ಎಂದು ಅವರಿಗೆ ದೃಢವಿಶ್ವಾಸವಾಯಿತು. ಹೀಗೆ ಅವರು ಎಲ್ಲ ಮುಸ್ಲಿಮರೊಡನೆ ದಾರೈನಿನ ಕಡೆಗೆ ಹೋಗಲು ಸಿದ್ಧತೆ ನಡೆಸುವಂತೆ ಹೇಳಿದರು.

ಈ ಘಟನೆಯ ವಿವರಣೆ ಮುಂದೆ ವಿವರಿಸುತ್ತೇನೆ. ಹೇಗೆ ಅವರು ಸಮುದ್ರವನ್ನು ಪಾರುಮಾಡಿದರು ಎಂಬುದು ಪ್ರತ್ಯಕ್ಷವಾಗಿ ಅಸಾಧ್ಯವೆಂದು ತೋರುತ್ತದೆ. ಸ್ವಲ್ಪ ಮಟ್ಟಿಗೆ ಅದರಲ್ಲಿ ಸತ್ಯವೂ ಇದೆ. ಸ್ವಲ್ಪ ಅತಿಶಯೋಕ್ತಿಯೂ ಇದೆ. ಅದರ ವಿವರಣೆ ನಾನು ಕೊನೆಗೆ ನೀಡುತ್ತೇನೆ. ಹೇಗಿದ್ದರೂ ದ್ವೀಪದ ತನಕ ತಲುಪಲು ಮುಸ್ಲಿಮರ ಬಳಿ ದೋಣಿ ಇತ್ಯಾದಿಗಳು ಇರಲಿಲ್ಲವೆಂದು ಹೇಳಲಾಗುತ್ತದೆ. ಅದನ್ನು ನೋಡಿಕೊಂಡು ಹಝ್ರತ್ ಅಲಾಅ್ ಬಿನ್ ಹಝ್ರಮಿ(ರ) ಜನರನ್ನು ಒಟ್ಟುಗೂಡಿಸಿ ಭಾಷಣ ಮಾಡುತ್ತಾ ಹೀಗೆ ಹೇಳಿದರು: ಅಲ್ಲಾಹನು ನಿಮಗಾಗಿ ಕಿಡಿಗೇಡಿಗಳ ಗುಂಪುಗಳನ್ನು ಒಂದೇ ಕಡೆ ಒಟ್ಟುಸೇರಿಸಿದನು ಮತ್ತು ಯುದ್ಧವನ್ನು ಸಮುದ್ರದ ಸಮೀಪಕ್ಕೆ ತಂದನು. ಅವನು ಮೊದಲು ನೆಲದಲ್ಲಿ ನಿಮಗೆ ತನ್ನ ಗುರುತುಗಳನ್ನು (ದೃಷ್ಟಾಂತಗಳನ್ನು) ತೋರಿಸಿರುವನು. ಈ ದೃಷ್ಟಾಂತಗಳ ಮೂಲಕ ನೀವು ಸಮುದ್ರದಲ್ಲೂ ಪಾಠ ಕಲಿಯಲು ಅವನು ಹಾಗೆ ಮಾಡಿದ್ದಾನೆ. ನೀವು ನಿಮ್ಮ ಶತ್ರುಗಳ ಬಳಿಗೆ ಹೋಗಿರಿ. ಸಮುದ್ರವನ್ನು ದಾಟುತ್ತಾ ಅವರ ಕಡೆಗೆ ಧಾವಿಸಿರಿ. ಏಕೆಂದರೆ ಅಲ್ಲಾಹನು ಅವರನ್ನು ನಿಮಗಾಗಿ ಒಂದು ಕಡೆ ಒಟ್ಟು ಸೇರಿಸಿದ್ದಾನೆ.

ಅವರೆಲ್ಲರೂ ಹೀಗೆ ಉತ್ತರಿಸಿದರು: ಅಲ್ಲಾಹನಾಣೆ, ನಾವು ಹಾಗೆಯೇ ಮಾಡುವೆವು. ದಹ್‌ನ ಕಣಿವೆಯಲ್ಲಿ ನಡೆದ ಪವಾಡವನ್ನು ನೋಡಿದ ಮೇಲೆ ನಾವು ಜೀವಂತವಿರುವ ತನಕ ಈ ಜನರನ್ನು ಹೆದರುವುದಿಲ್ಲ. ಹಝ್ರತ್ ಅಲಾಅ್(ರ) ಮತ್ತು ಎಲ್ಲ ಮುಸ್ಲಿಮರು ಆ ಪ್ರದೇಶದಿಂದ ನಡೆದುಕೊಂಡು ಸಮುದ್ರ ತೀರಕ್ಕೆ ಬಂದರು. ಅವರು ಅಲ್ಲಾಹನ ಮುಂದೆ ಹೀಗೆ ದುಆ ಮಾಡುತ್ತಿದ್ದರು: **ಯಾ ಅರ್‌ಹಮುರ್ರಾಹಿಮೀನ್, ಯಾ ಕರೀಂ, ಯಾ ಹಲೀಂ, ಯಾ ಅಹದ್, ಯಾ ಸಮದ್, ಯಾ ಹಯ್ಯು, ಯಾ ಮುಹ್‌ಯುಲ್ ಮೌತಿ, ಯಾ ಹಯ್ಯು, ಯಾ ಖಯ್ಯೂಂ. ಲಾ ಇಲಾಹ ಇಲ್ಲಾ ಅಂತ ಯಾ ರಬ್ಬನಾ.** ಓ ಕರುಣೆ ತೋರುವವರಲ್ಲಿ ಅತ್ಯಂತವಾಗಿ ಕರುಣಿಸುವವನೇ, ಓ ಕರೀಮ್! ಓ ಅತ್ಯಂತ ತಾಳ್ಮೆವುಳ್ಳವನೇ! ಓ ಒಂಟಿಯಾಗಿರುವವನೇ! ಓ ಬದುಕಿರುವವನೇ, ಇತರರಿಗೆ ಜೀವ ಕೊಡುವವನೇ, ಮತ್ತು ಮೃತರಿಗೆ ಜೀವ ಕೊಡುವವನೇ! ಓ ಆತನೇ ಬದುಕಿ ಇತರರಿಗೆ ಜೀವ ನೀಡುವವನೇ! ಓ ಸ್ಥಾಪಿತನಾದ ಮತ್ತು ಇತರರನ್ನು ಸ್ಥಾಪಿಸುವವನೇ! ಓ ನಮ್ಮ ಪ್ರಭು! ನಿನ್ನ ಹೊರತು ಆರಾಧನೆಗೆ ಯಾರೂ ಅರ್ಹನಿಲ್ಲ.

ಆದಾಗ್ಯೂ, ಹಝ್ರತ್ ಅಲಾಅ್(ರ) ದುಆ ಮಾಡುತ್ತಾ ಸೈನ್ಯದ ಎಲ್ಲ ಜನರೊಡನೆ ಸಮುದ್ರದಲ್ಲಿ ತಮ್ಮ ಸವಾರಿಮೃಗಗಳನ್ನು ಹಾಕಲು ಹೇಳಿದರು. ಎಲ್ಲರೂ ಹಾಗೆಯೇ ಮಾಡಿದರು ಮತ್ತು ಈ ಕೊಲ್ಲಿ ಪ್ರದೇಶವನ್ನು ಯಾವುದೇ ನಷ್ಟಗಳಿಲ್ಲದೇ ಅವರು ಪಾರು ಮಾಡಿದರು. ಒಂಟೆಗಳ ಪಾದಗಳು ಮುಳುಗದಂತೆ ಮತ್ತು ಸಮುದ್ರದಲ್ಲಿ ಮುಸ್ಲಿಮರಿಗೆ ಏನೂ ನಷ್ಟವಾಗದಂತೆ ನೀರನ್ನು ಚಿಮುಕಿಸಲಾದ ಮೃದುವಾದ ಮರಳಿನ ಮೇಲೆ ಅವರು ನಡೆಯುತ್ತಿದ್ದರು ಎಂದು ತೋರುತ್ತಿತ್ತು. ಒಂದು ಸಣ್ಣ ಉಂಡೆ ಕಣ್ಮರೆಯಾಗುವುದನ್ನು ಗಮನಿಸಲಾಗಿತ್ತು. ಇದನ್ನು ಹಝ್ರತ್ ಅಲಾ(ರ) ಅವರು ತಂದರು. ಆದರೆ, ಸಾಹಿಲ್‌ನಿಂದ ದರಿನ್‌ಗೆ ಪ್ರಯಾಣವನ್ನು ಒಂದು ಹಗಲು ಮತ್ತು ಒಂದು ರಾತ್ರಿ ದೋಣಿಗಳ ಮೂಲಕ ಪೂರ್ಣಗೊಳಿಸಬಹುದು ಎಂದು ಹೇಳಲಾಗುತ್ತದೆ, ಆದರೆ ಈ ಕಾರವಾನ್ ಒಂದು ದಿನದ ಅತ್ಯಂತ ಕಡಿಮೆ ಸಮಯದಲ್ಲಿ ಈ ದೂರವನ್ನು ಕ್ರಮಿಸಿತು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–289, ದರುಲ್ ಕುತುಬ್ ಇಲ್ಮಿಯ ಬೈರೂತ್ 2012) (ಸಯ್ಯಿದುನಾ ಹಝ್ರತ್ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಪುಟ–241–242, ಇಸ್ಲಾಮಿ ಕುತುಬ್ ಖಾನ ಲಾಹೋರ್) (ಸಯ್ಯಿದುನಾ ಹಝ್ರತ್ ಅಬೂಬಕರ್ ಸಿದ್ದೀಖ್ ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲಿ ಮುಹಮ್ಮದ್ ಸಲಾಬಿ, ಪುಟ–344–345, ಮಕ್ತಬ ಅಲ್‌ಫುರ್ಖಾನ್ ಮುಝಫ್ಫರ್‌ಗಡ್ ಪಾಕಿಸ್ತಾನ್)

ಈಗಿನ ವ್ಯಾಖ್ಯಾನಗಾರರು ಇದರ ಬಗ್ಗೆ ವ್ಯಾಖ್ಯಾನವನ್ನು ಬರೆದಿರುವರು. ಆ ಸಮಯದಲ್ಲಿ ಇರಾನಿನ ಕೊಲ್ಲಿಯಲ್ಲಿ ಸಮುದ್ರದ ಇಳಿತದ ಸಮಯವಾಗಿರಬಹುದು ಅಥವಾ ಮುಸ್ಲಿಮರಿಗೆ ಸ್ಥಳೀಯ ನಿವಾಸಿಗಳಿಂದ ದೋಣಿಗಳು ಲಭಿಸಿರಬಹುದು. ಅದರ ಮೇಲೆ ಸವಾರರಾಗಿ ಸಮುದ್ರವನ್ನು ಪಾರು ಮಾಡಿರಬಹುದು ಎಂದು ಹೇಳುತ್ತಾರೆ. ಆದರೆ ವರದಿಗಳಲ್ಲಿ ಇದರ ವಿಶದವಾದ ವಿವರಣೆ ಲಭಿಸುವುದಿಲ್ಲ. ಹೇಗಿದ್ದರೂ ಮುಸ್ಲಿಮರು ಬಹ್ರೈನಿಗೆ ತಲುಪಿದರು ಎಂಬುದರಲ್ಲಿ ಸಂಶಯವಿಲ್ಲ.
(ಹಝ್ರತ್ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಉರ್ದು ಅನುವಾದ, ಪುಟ–242, ಇಸ್ಲಾಮಿ ಕುತುಬ್ ಖಾನ ಲಾಹೋರ್) ಹೇಗೆ ತಲುಪಿದರು ಎಂಬುದು ಅಲ್ಲಾಹನೇ ಬಲ್ಲನು. ಈ ದೃಷ್ಟಾಂತದ ಬಗ್ಗೆ ಅಥವಾ ಈ ಪವಾಡದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನ ತಫ್ಸೀರ್‌ನಲ್ಲಿ ಹಝ್ರತ್ ಮೂಸಾ(ಅ)ರ ಘಟನೆಯನ್ನು ವಿವರಿಸುತ್ತಾ ನಮಗೆ ಮಾರ್ಗದರ್ಶನ ನೀಡಿರುವರು. ಹಝ್ರತ್ ಮೂಸಾ(ಅ)ರ ಹಿಜ್ರತ್ ಸಮಯದಲ್ಲಿ ಸಮುದ್ರವನ್ನು ವಿಭಾಗಿಸಿದ ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಪವಿತ್ರ ಖುರ್‌ಆನಿನ ಪ್ರಕಾರ ಈ ಘಟನೆ ಏನಾಗಿತ್ತು ಎಂಬುದರ ಬಗ್ಗೆ ಹೀಗೆ ತಿಳಿದುಬರುತ್ತದೆ. ಬನೀ ಇಸ್ರಾಈಲರು ಪವಿತ್ರ ಭೂಮಿಯನ್ನು ಪಡೆಯಲಿಕ್ಕಾಗಿ ಹೋಗುತ್ತಿದ್ದರು. ಹಿಂದಿನಿಂದ ಫಿರ್‌ಔನಿನ ಸೈನ್ಯ ತಲುಪಿತು. ಇದನ್ನು ನೋಡಿ ಬನೀ ಇಸ್ರಾಈಲ್ಯರು ಗಾಬರಿಗೊಂಡರು. ನಾವು ಹಿಡಿಯಲ್ಪಡುವೆವು ಎಂದು ಭಾವಿಸಿದರು. ಆದರೆ ಅಲ್ಲಾಹನು ಹಝ್ರತ್ ಮೂಸಾ(ಅ)ರ ಮೂಲಕ ಅವರಿಗೆ ಸಮಾಧಾನ ನೀಡಿದನು. ತನ್ನ ಬಡಿಗೆಯನ್ನು ಸಮುದ್ರದಲ್ಲಿ ಹೊಡೆಯಲು ಹಝ್ರತ್ ಮೂಸಾರೊಡನೆ(ಅ) ಅಲ್ಲಾಹನು ಹೇಳಿದನು. ಅದರ ಪರಿಣಾಮವಾಗಿ ಸಮುದ್ರದಲ್ಲಿ ಒಂದು ಮಾರ್ಗ ಉಂಟಾಯಿತು. ಅದರ ಮಾರ್ಗವಾಗಿ ಅವರು ಹೊರಟರು. ಅವರ ಎರಡೂ ಕಡೆ ಬಂಡೆಕಲ್ಲಿನ ಹಾಗೆ ನೀರು ಮೇಲೇರಿ ನಿಂತಿತ್ತು.

ಫಿರ್‌ಔನಿನ ಸೈನ್ಯ ಅವರನ್ನು ಹಿಂಬಾಲಿಸಿದರು. ಆದರೆ ಬನೀ ಇಸ್ರಾಈಲ್ಯರು ಸುರಕ್ಷಿತವಾಗಿ ಸಮುದ್ರವನ್ನು ದಾಟಿದ ನಂತರ ನೀರು ಮರಳಿ ಬಂತು. ಈಜಿಪ್ಟಿನ ಜನರು ಮುಳುಗಿ ಹೋದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ಘಟನೆಯನ್ನು ಮನವರಿಕೆ ಮಾಡಲು ನೆನಪಿಡಬೇಕಾದ ಸಂಗತಿಯೇನೆಂದರೆ, ಪವಿತ್ರ ಖುರ್‌ಆನಿನ ಪಾಠಗಳ ಪ್ರಕಾರ ಎಲ್ಲ ದೃಷ್ಟಾಂತಗಳು ಅಲ್ಲಾಹನ ಕಡೆಯಿಂದ ಆಗಿರುತ್ತವೆ. ಯಾವನೇ ಮನುಷ್ಯನ ಸಾಮರ್ಥ್ಯ ಅದರಲ್ಲಿ ಇರುವುದಿಲ್ಲ. ಆದ್ದರಿಂದ ಮೂಸಾ(ಅ) ಬಡಿಗೆಯನ್ನು ಎತ್ತಿ ಸಮುದ್ರದಲ್ಲಿ ಹೊಡೆಯುವುದು ಒಂದು ಸಂಕೇತ ಮಾತ್ರವಾಗಿದೆ. ಆದ್ದರಿಂದ ಹಝ್ರತ್ ಮೂಸಾ(ಅ)ರ ಬಡಿಗೆ ಮತ್ತು ಸಮುದ್ರದ ಇಬ್ಭಾಗವಾಗುವುದರಲ್ಲಿ ಯಾವುದೇ ಸಂಬಂಧವಿಲ್ಲ.

ಸಮುದ್ರ ಎರಡು ತುಂಡಾಯಿತು ಎಂದು ಪವಿತ್ರ ಖುರ್‌ಆನಿನ ಪದಗಳಿಂದ ಸಾಬೀತಾಗುವುದಿಲ್ಲ. ಬದಲಾಗಿ ಪವಿತ್ರ ಖುರ್‌ಆನಿನಲ್ಲಿ ಈ ಘಟನೆಯ ಕುರಿತು ಎರಡು ಪದಗಳನ್ನು ಉಪಯೋಗಿಸಲಾಗಿವೆ. ಒಂದು ಫರಖ್ ಮತ್ತೊಂದು ಇನ್‌ಫಲಖ್. ಅದರ ಅರ್ಥ ಬೇರ್ಪಡುವುದು ಎಂದಾಗಿದೆ. ಆದ್ದರಿಂದ ಪವಿತ್ರ ಖುರ್‌ಆನಿನ ಪದಗಳ ಪ್ರಕಾರ ಈ ಘಟನೆಯ ವಿವರದಿಂದ ಸಾಬೀತಾಗುವುದೇನೆಂದರೆ, ಬನೀ ಇಸ್ರಾಈಲ್ ಸಮುದ್ರವನ್ನು ದಾಟುವಾಗ ಅದು ಬೇರ್ಪಟ್ಟಿತ್ತು. ಎಂದರೆ ಒಂದು ಕಡೆಗೆ ಸರಿದು ನಿಂತಿತ್ತು. ನೀರಿಲ್ಲದ ಜಾಗದ ಮೂಲಕ ಬನೀ ಇಸ್ರಾಈಲ್ ದಾಟಿದರು. ಸಮುದ್ರ ತೀರದಲ್ಲಿ ಹೀಗೆ ಸಾಮಾನ್ಯವಾಗಿ ಆಗುತ್ತದೆ.

ನೇಪೋಲಿಯನನ ಜೀವಿತದ ಬಗ್ಗೆಯೂ ಹೀಗೆ ಬರೆಯಲಾಗಿದೆ. ಅವರು ಈಜಿಪ್ಟಿನ ಮೇಲೆ ದಾಳಿ ನಡೆಸಿದ ಸಮಯದಲ್ಲಿ ಅವರು ಕೂಡ ತನ್ನ ಸೈನ್ಯದ ಒಂದು ಸಂಘದೊಂದಿಗೆ ಕೆಂಪು ಸಮುದ್ರದ ತೀರದ ಬಳಿಯಿಂದ ಸಮುದ್ರದ ಇಳಿತದ ಸಮಯದಲ್ಲಿ ದಾಟಿದ್ದರು. ದಾಟುವಾಗ ಸಮುದ್ರದ ಭರತದ ಸಮಯ ಸಮೀಪವಾಯಿತು. ಬಹಳ ಕಷ್ಟದಿಂದ ಅವರು ಬಚಾವಾಗಿದ್ದರು. ಹಝ್ರತ್ ಮೂಸಾ(ಅ)ರ ಈ ಘಟನೆಯಲ್ಲಿ ಇರುವ ಪವಾಡವೇನೆಂದರೆ, ಅಲ್ಲಾಹನು ಬನೀ ಇಸ್ರಾಈಲರನ್ನು ಸಮುದ್ರದ ಇಳಿತದ ಸಮಯದಲ್ಲಿ ಸಮುದ್ರದ ಮುಂದೆ ತಲುಪಿಸಿದನು ಮತ್ತು ಹಝ್ರತ್ ಮೂಸಾ(ಅ) ಕೈಯೆತ್ತುತ್ತಲೇ ಅಲ್ಲಾಹನ ಆದೇಶ ಪ್ರಕಾರ ನೀರು ಕಡಿಮೆಯಾಯಿತು. ಆದರೆ ಫಿರ್‌ಔನಿನ ಸೈನ್ಯ ಸಮುದ್ರದೊಳಗೆ ಪ್ರವೇಶಿಸಿದಾಗ ಅಸಾಮಾನ್ಯವಾದ ಅಡಚಣೆಗಳು ಅವನ ಮುಂದೆ ಬಂದುವು. ಅವನ ಸೈನ್ಯ ಬಹಳ ಮೆಲ್ಲವಾಗಿ ಬನೀ ಇಸ್ರಾಈಲಿನ ಹಿಂದೆ ನಡೆದಿತ್ತು. ಅವರು ಸಮುದ್ರದ ಮಾರ್ಗದಲ್ಲೇ ಇದ್ದಾಗ ಸಮುದ್ರದ ಭರತದ ಸಮಯವಾಯಿತು. ಹೀಗೆ ಶತ್ರುಗಳು ಮುಳುಗಿ ಹೋದರು. ಸಮುದ್ರದಲ್ಲಿ ಇಳಿತ ಮತ್ತು ಭರತ ಆಗುತ್ತಾ ಇರುತ್ತದೆ. ಒಂದು ಸಮಯದಲ್ಲಿ ನೀರು ಸಮುದ್ರ ತೀರದಿಂದ ಬಹಳ ಹಿಂದಕ್ಕೆ ಹೋಗುತ್ತದೆ. ಬೇರೊಂದು ಸಮಯದಲ್ಲಿ ಮುಂದೆ ಬರುತ್ತದೆ.

ಸಮುದ್ರ ವಿಭಾಗಿಸಲ್ಪಟ್ಟ ಘಟನೆಯು ಸಮುದ್ರದ ಇಳಿತ ಮತ್ತು ಭರತದ ಸ್ಥಿತಿಗೆ ಸಂಬಂಧಪಟ್ಟದ್ದಾಗಿದೆ. ಹಝ್ರತ್ ಮೂಸಾ(ಅ) ಸಮುದ್ರದ ಇಳಿತದ ಸಮಯದಲ್ಲಿ ಸಮುದ್ರವನ್ನು ದಾಟಿದರು. ಸಮುದ್ರ ಹಿಂದಕ್ಕೆ ಸರಿದಿತ್ತು. ಫಿರ್‌ಔನ್ ಒಂದು ದಿನದ ನಂತರ ಅಲ್ಲಿಗೆ ತಲುಪಿದ್ದನು. ಬಹಳ ಕಷ್ಟದಿಂದ ಅಲ್ಲಿಯ ತನಕ ತಲುಪಿದ್ದನು. ಆ ಸಮಯದಲ್ಲಿ ಹಝ್ರತ್ ಮೂಸಾ(ಅ) ಸಮುದ್ರವನ್ನು ಬಹುತೇಕ ದಾಟಿ ಆಗಿದ್ದರು. ಮೂಸಾ(ಅ) ದಾಟಿಹೋಗುತ್ತಿರುವುದನ್ನು ಕಂಡಾಗ ಫಿರ್‌ಔನ್ ಬೇಗನೇ ತನ್ನ ರಥಗಳನ್ನು ಸಮುದ್ರ ಮಾರ್ಗವಾಗಿ ಹಾಕಿದನು. ಆದರೆ ಸಮುದ್ರದ ಒದ್ದೆಯಾದ ಮರಳು ರಥಗಳು ನಾಶವಾಗಲು ಕಾರಣವಾಯಿತು. ಅವನ ರಥಗಳು ಅದರೊಳಗೆ ಸಿಲುಕಿದುವು. ಎಷ್ಟು ತಡವಾಯಿತು ಎಂದರೆ, ಸಮುದ್ರದ ಭರತದ ಸಮಯವಾಯಿತು. ನೀರು ವರ್ಧಿಸಲು ಶುರುವಾಯಿತು. ಈಗ ಅವನಿಗೆ ಮುಂದಕ್ಕೆ ಹೋಗಲು ಅಥವಾ ಹಿಂದಕ್ಕೆ ಹೋಗಲೂ ಎರಡೂ ಆಗದ ಸ್ಥಿತಿ ಉಂಟಾಯಿತು. ಅದರ ಪರಿಣಾಮವಾಗಿ ಸಮುದ್ರದ ಮಧ್ಯದಲ್ಲಿ ಸಿಲುಕಿದನು. ಅವನು ಮತ್ತು ಅವನ ಅನೇಕ ಸಹಚರರು ಸಮುದ್ರದಲ್ಲಿ ಮುಳುಗಿದರು. ಭರತದ ಸಮಯವಾಗಿದ್ದ ಕಾರಣದಿಂದ ತೀರ ಪ್ರದೇಶಕ್ಕೆ ಬರುತ್ತಿದ್ದ ನೀರು ಅವರ ಶವಶರೀರವನ್ನು ಸಮುದ್ರ ತೀರಕ್ಕೆ ಬೀಸಾಕಿತು. (ತಫ್ಸೀರೆ ಕಬೀರ್, ಸಂಪುಟ–1, ಪುಟ–419–422)

ಹೇಗಿದ್ದರೂ ಮುಸ್ಲಿಮರು ದಾರೈನಿಗೆ ಹೇಗಾದರೂ ತಲುಪಿದರು. ನಾನು ಹೇಳಿದಂತೆ ಸಮುದ್ರ ಇಳಿತದಂತಹ ಏನಾದರೂ ಅಲ್ಲಿ ನಡೆದಿರಬಹುದು.

ದಾರೈನಿಗೆ ತಲುಪಿ ಇರುಪಕ್ಷಗಳ ನಡುವೆ ಘೋರವಾದ ಯುದ್ಧ ನಡೆಯಿತು. ಎಲ್ಲ ದಂಗೆಗಾರರು ಕೊಲ್ಲಲ್ಪಟ್ಟರು. ದೂತನಾಗಿಯೂ ಯಾರೂ ಉಳಿಯಲಿಲ್ಲ. ಮುಸ್ಲಿಮರು ಅವರ ಕುಟುಂಬದವರನ್ನು ದಾಸ ದಾಸಿಯರನ್ನಾಗಿ ಮಾಡಿದರು ಮತ್ತು ಅವರ ಸಂಪತ್ತನ್ನು ವಶಪಡಿಸಿಕೊಂಡರು. ಪ್ರತಿಯೊಬ್ಬ ಕುದುರೆಸವಾರನಗೆ 6 ಸಾವಿರ ದಿರ್ಹಂ ಮತ್ತು ಪ್ರತಿಯೊಬ್ಬ ಕಾಲಾಳು ಸೈನಿಕನಿಗೆ 2 ಸಾವಿರ ದಿರ್ಹಂ ಯುದ್ಧ ಸಂಪತ್ತಾಗಿ ಲಭಿಸಿತು. ಸಮುದ್ರತೀರದಿಂದ ಅವರನ್ನು ತಲುಪಲು ಮತ್ತು ಅವರನ್ನು ಎದುರಿಸಲು ಮುಸ್ಲಿಮರಿಗೆ ಇಡೀ ದಿನ ಬೇಕಾಯಿತು. ಅವುಗಳನ್ನು ಮುಗಿಸಿದ ನಂತರ, ಅವರು ಮತ್ತೆ ಮರಳಿದರು.

ಹಝ್ರತ್ ಸುಮಾಮಾ ಬಿನ್ ಉಸಾಲ್(ರ) ರವರ ಶಹಾದತ್‌ನ ಬಗ್ಗೆ ಬರೆಯಲಾಗಿದೆ, ಹಝ್ರತ್ ಅಲಾ ಬಿನ್ ಹಝ್ರಮಿ(ರ) ಅಲ್ಲಿ ಉಳಿಯಲು ಇಷ್ಟಪಡುವವರನ್ನು ಹೊರತುಪಡಿಸಿ ಎಲ್ಲ ಜನರನ್ನು ಮರಳಿ ಕರೆತಂದರು. ಹಿಂದಿರುಗಿದವರಲ್ಲಿ ಹಝ್ರತ್ ಸುಮಾಮಾ ಬಿನ್ ಉಸಾಲ್(ರ) ಕೂಡ ಸೇರಿದ್ದಾರೆ. ಅಬ್ದುಲ್ಲಾ ಬಿನ್ ಹಝ್ಛಫ್(ರ) ಹೇಳಿದರು: ನಾವು ಬನು ಖೈಸ್ ಬಿನ್ ಸಾಲಬಾದ ಚಿಲುಮೆಯಲ್ಲಿ ತಂಗಿದ್ದೆವು. ಜನರ ಕಣ್ಣುಗಳು ಹಝ್ರತ್ ಸುಮಾಮಾ ಅವರ ಮೇಲೆ ಬಿದ್ದವು ಮತ್ತು ಅವರು ಅವರ ದೇಹದ ಮೇಲೆ ಹುತಮ್‌ನ ನಿಲುವಂಗಿಯನ್ನು ನೋಡಿದರು. ಇದೇ ಹುತಮ್‌ನ ನಿಲುವಂಗಿಯನ್ನು ಹಝ್ರತ್ ಸುಮಾಮಾ ಅವರನ್ನು ಕೊಂದ ನಂತರ ಯುದ್ಧದ ಸಂಪತ್ತಾಗಿ ನೀಡಲಾಯಿತು. ಅವರು ಓರ್ವ ವ್ಯಕ್ತಿಯನ್ನು ಇದರ ಬಗ್ಗೆ ವಿಚಾರಿಸಲು ಕಳುಹಿಸಿದರು ಅಂದರೆ ಈ ಗೋತ್ರದ ಜನರು ಕಂಡುಹಿಡಿಯಲು ಒಬ್ಬ ವ್ಯಕ್ತಿಯನ್ನು ಕಳುಹಿಸಿದರು ಮತ್ತು ಹಝ್ರತ್ ಸುಮಾಮಾ(ರ) ಅವರನ್ನು ನಿಮ್ಮ ಬಳಿ ಈ ನಿಲುವಂಗಿ ಎಲ್ಲಿಂದ ಬಂತು ಮತ್ತು ಹುತಮ್‌ನ ಬಗ್ಗೆ ಕೇಳಿದರು ನೀವು ಅವರನ್ನು ಕೊಂದಿದ್ದೀರಾ(ಹುತಮ್ ಅವರ ನಾಯಕನಾಗಿದ್ದ) ಅಥವಾ ಬೇರೆ ಯಾರಾದರೂ ಕೊಂದಿದ್ದಾರೆಯೇ? ಈ ವ್ಯಕ್ತಿ ಬಂದು ಹಝ್ರತ್ ಸುಮಾಮಾ ಅವರನ್ನು ವಸ್ತ್ರದ ಬಗ್ಗೆ ಕೇಳಿದರು. ಅದಕ್ಕೆ ಅವರು ಹೇಳಿದರು ನಾನು ಅದನ್ನು ಯುದ್ಧದ ಸಂಪತ್ತಾಗಿ ಪಡೆದುಕೊಂಡಿದ್ದೇನೆ ಎಂದು ಹೇಳಿದರು. ನೀವು ಹುತಮ್‌ನನ್ನು ಕೊಂದಿದ್ದೀರಿ ಎಂದು ಈ ವ್ಯಕ್ತಿ ಕೇಳಿದನು? ಹಝ್ರತ್ ಸುಮಾಮಾ ಇಲ್ಲ ಎಂದು ಹೇಳಿದರು. ನಾನು ಅವನನ್ನು ಕೊಲ್ಲಬೇಕು ಎಂದು ನಾನು ಬಯಸಿದ್ದೆ ಆದರೆ ನಾನು ಅವನನ್ನು ಕೊಲ್ಲಲಿಲ್ಲ. ಅದಕ್ಕೆ ಆ ವ್ಯಕ್ತಿ ಕೇಳಿದನು "ಈ ನಿಲುವಂಗಿ ನಿಮ್ಮ ಬಳಿ ಎಲ್ಲಿಂದ ಬಂತು?" ಹಝ್ರತ್ ಸುಮಾಮಾ(ರ) ಹೇಳಿದರು, ನಾನು ಈಗಾಗಲೇ ನಿಮಗೆ ಉತ್ತರವನ್ನು ನೀಡಿದ್ದೇನೆ ಅದು ಯುದ್ಧದ ಸಂಪತ್ತಿನಲ್ಲಿ ನಾನು ಪಡೆದಿದ್ದೇನೆ ಎಂದು. ತದನಂತರ ಆ ಗೋತ್ರದ ಈ ವ್ಯಕ್ತಿಯು ಬಂದು ತನ್ನ ಎಲ್ಲಾ ಸಂಭಾಷಣೆಯನ್ನು ತನ್ನ ಸ್ನೇಹಿತರಿಗೆ ವರದಿ ಮಾಡಿದನು. ಅವರೆಲ್ಲರೂ ಹಝ್ರತ್ ಸುಮಾಮಾ(ರ) ಅವರ ಬಳಿಗೆ ಬಂದು ಅವರನ್ನು ಸುತ್ತುವರೆದರು. ನೀನೇ ಹುತಮ್‌ನ ಕೊಲೆಗಾರ ಎಂದು ಎಲ್ಲರೂ ಹೇಳಿದರು. ಅದಕ್ಕೆ ಹಝ್ರತ್ ಸುಮಾಮಾ(ರ) ಅವರು ನೀವು ಸುಳ್ಳು ಹೇಳುತ್ತಿದ್ದೀರಿ ಎಂದು ಹೇಳಿದರು. ನಾನು ಅವನ ಕೊಲೆಗಾರನಲ್ಲ. ಆದಾಗ್ಯೂ, ನಾನು ಈ ನಿಲುವಂಗಿಯನ್ನು ಯುದ್ಧದ ಸಂಪತ್ತಿನಲ್ಲಿ ಪಡೆದುಕೊಂಡೆ. ಅವರೆಲ್ಲರು ಹೇಳಿದರು ಪಾಲು ಕೊಲೆಗಾರನಿಗೆ ಮಾತ್ರ ನೀಡಲಾಗುತ್ತದೆ. ಹಝ್ರತ್ ಸುಮಾಮಾ(ರ) ಅವರು ಈ ನಿಲುವಂಗಿಯನ್ನು ಅವರ ದೇಹದ ಮೇಲೆ ಇರಲಿಲ್ಲ ಆದರೆ ಅವರ ಸವಾರಿ ಅಥವಾ ಅವರ ವಸ್ತುಗಳ ಮೇಲೆ ಕಂಡುಬಂದಿದೆ ಎಂದು ಹೇಳಿದರು. ನೀವು ಸುಳ್ಳು ಹೇಳುತ್ತಿದ್ದೀರಿ ಎಂದು ಜನರು ಹೇಳಿದರು, ನಂತರ ಅವರೆಲ್ಲರು ಅವರಿಗೆ ಶಹೀದ್‌ರನ್ನಾಗಿ ಮಾಡಿದರು. (ತಾರಿಖ್ ಅಲ್–ತಬರಿ, ಸಂಪುಟ–2, ಪುಟಗಳು–289 ರಿಂದ 290, ದಾರ್ ಅಲ್–ಕಿತಾಬ್ ಅಲ್–ಉಲಮಿಯಾ ಬೈರುತ್ 2012)

ಹಝ್ರತ್ ಸುವೈದ್ ಬಿನ್ ಮುಖರ್ರನ್ ಧರ್ಮತ್ಯಾಗಿಗಳಾದ ದಂಗೆಗಾರರ ವಿರುದ್ಧ ನಡೆಸಲಾದ ಹತ್ತನೇ ಕಾರ್ಯಾಚರಣೆಯ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್(ರ) ಒಂದು ಧ್ವಜವನ್ನು ಹಝ್ರತ್ ಸುವೈದ್ ಬಿನ್ ಮುಖರ್ರನ್‌ರಿಗೆ ಕೊಟ್ಟರು ಮತ್ತು ಅವರೊಡನೆ ಯಮನಿನ ಪ್ರದೇಶವಾದ ತಹಾಮಗೆ ಹೋಗಲು ಹೇಳಿದರು.
(ತಾರೀಖ್ ಅತ್ತಬರಿ, ಸಂಪುಟ–2, ಪುಟ–257, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ನಿಘಂಟಿನಲ್ಲಿ, ತಿಹಾಮಾ ಎಂದರೆ ವಿಪರೀತ ಶಾಖ ಮತ್ತು ಗಾಳಿಯನ್ನು ನಿಲ್ಲಿಸುವುದು. ಅದೇ ರೀತಿಯಲ್ಲಿ, ಇದು ನಿಘಂಟಿನಲ್ಲಿ ಕಡಿಮೆ ಎಂಬ ಅರ್ಥವನ್ನು ಹೊಂದಿದೆ. (ಲಿಸಾನುಲ್ ಅರಬ್)

ಯೆಮೆನ್‌ನ ಪಶ್ಚಿಮ ಮತ್ತು ದಕ್ಷಿಣಕ್ಕೆ ತಿಹಾಮಾ ಎಂದು ಕರೆಯಲ್ಪಡುವ ಕಲಾಜ್ಮ್ ಕೊಲ್ಲಿಯ ತೀರದಲ್ಲಿ ತಗ್ಗು ಪ್ರದೇಶದ ಒಂದು ಪಟ್ಟಿಯಿದೆ. ಈ ಭೂಮಿಯಲ್ಲಿ ಅನೇಕ ಕಡಿಮೆ ಆದರೆ ಕಡಿದಾದ ಬೆಟ್ಟಗಳಿವೆ. ತಿಹಾಮಾದ ಉತ್ತರದ ಗಡಿಯು ಮಕ್ಕಾ ಸಮೀಪ ತಲುಪಿತು ಮತ್ತು

ದಕ್ಷಿಣ ಯೆಮೆನ್‌ನ ರಾಜಧಾನಿ ಸನಾದಿಂದ ಮೂರೂವರೆ ನೂರು ಮೈಲುಗಳಷ್ಟು ದೂರದಲ್ಲಿ ಕೊನೆಗೊಂಡಿತು.

ತಿಹಾಮಾ ಅನೇಕ ಹಳ್ಳಿಗಳು ಮತ್ತು ಪಟ್ಟಣಗಳನ್ನು ಒಳಗೊಂಡಿರುವ ಯೆಮೆನ್‌ನ ಜಿಲ್ಲೆಯಾಗಿದೆ. (ಹಝ್ರತ್ ಅಬುಬಕರ್(ರ) ಕೆ ಸರ್ಕಾರಿ ಖುತೂತ್, ಪುಟ-40-41, ಇದಾರ ಇಸ್ಲಾಮಿಯಾತ್ ಲಾಹೋರ್)

ಹಝ್ರತ್ ಸುವೈದ್ ಬಿನ್ ಮುಖರ್ರನ್‌ರ ಪರಿಚಯವೇನೆಂದರೆ, ಅವರ ತಂದೆಯ ಹೆಸರು ಮುಖರ್ರನ್ ಬಿನ್ ಆಯಿಝ್ ಎಂದಾಗಿತ್ತು. ಅವರ ಸಂಬಂಧ ಬಝೀನ ಗೋತ್ರದೊಂದಿಗೆ ಆಗಿತ್ತು. ಅವರ ಉಪನಾಮ ಅಬೂಅದ್ದಿ ಎಂದಾಗಿತ್ತು. ಅಬೂ ಉಮರ್ ಎಂದೂ ಹೇಳಲಾಗುತ್ತದೆ. ಹಿಜರೀ 5ರಲ್ಲಿ ಹಝ್ರತ್ ಸುವೈದ್ ಬಿನ್ ಮುಖರ್ರನ್ ಮುಝ್ನಿ(ರ) ಇಸ್ಲಾಂ ಸ್ವೀಕಾರ ಮಾಡಿದ್ದರು. ಅವರು ಹಝ್ರತ್ ಪೈಗಂಬರ್(ಸ)ರೊಂದಿಗೆ ಖಂದಕ್ ಯುದ್ಧದಲ್ಲಿ ಭಾಗವಹಿಸಿದ್ದರು. ಅದರ ನಂತರ ಎಲ್ಲ ಯುದ್ಧಗಳಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದರು. ಅವರು ಹಝ್ರತ್ ನೂಮಾನ್ ಬಿನ್ ಮುಖರ್ರನಿನ ಸಹೋದರರಾಗಿದ್ದರು. ಅವರು ಇರಾನಿನ ವಿಜಯಗಳಲ್ಲಿ ಹಿರಿದಾದ ಸಾಧನೆಯನ್ನು ಮಾಡಿದ್ದರು. (ಅಸದುಲ್‌ಗಾಬ, ಸಂಪುಟ-2, ಪುಟ-600, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2008) (ತಬಖಾತುಲ್ ಕುಬ್ರ, ಸಂಪುಟ-6, ಪುಟ-97, ಸಂಪುಟ-1, ಪುಟ-222, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಐತಿಹಾಸಿಕ ಪುಸ್ತಕಗಳಲ್ಲಿ ಹಝ್ರತ್ ಸುವೈದ್ ಅವರು ತಿಹಾಮ್‌ಗೆ ಹೋಗುವ ಬಗ್ಗೆ ಮತ್ತು ಅಲ್ಲಿ ಅವರ ಧರ್ಮತ್ಯಾಗಿಗಳ ವಿರುದ್ಧದ ಕ್ರಮಗಳ ಬಗ್ಗೆ ವಿವರಗಳು ಒರೆಯುವುದಿಲ್ಲ. ಆದಾಗ್ಯೂ, ತಿಹಾಮಾದ ಜನರ ಧರ್ಮಭ್ರಷ್ಟತೆ ಮತ್ತು ದಂಗೆಯ ಸಂದರ್ಭಗಳು ಮತ್ತು ಘಟನೆಗಳನ್ನು ಪ್ರವಾದಿ(ಸ)ರವರ ಇತಿಹಾಸ ಪುಸ್ತಕಗಳಲ್ಲಿ ವಿವರಿಸಲಾಗಿದೆ. ಮತ್ತು ಅವರು(ಸ) 10 ಹಿಜ್ರಿಯಲ್ಲಿ ವಿದಾಯ ಹಜ್ ಅನ್ನು ನಿರ್ವಹಿಸಿದರು, ಅದರ ನಂತರ, ಯೆಮನ್‌ನಲ್ಲಿ ಮುಹಸ್ಸಿಲೀನೆ ಝಕಾತ್ ಅನ್ನು ನೇಮಿಸಿದರು. ಪವಿತ್ರ ಪ್ರವಾದಿ(ಸ)ರವರು ಯೆಮೆನ್ ಅನ್ನು ಏಳು ಭಾಗಗಳಾಗಿ ವಿಂಗಡಿಸಿದರು. ಅವರು ತಾಹಿರ್ ಬಿನ್ ಅಬು ಹಾಲಾ ಅವರನ್ನು ಅಧಿಕಾರಿಯನ್ನಾಗಿ ನೇಮಿಸಿದ್ದರು.

ಘಹಾಮ್‌ನಲ್ಲಿ ಕೆಳಮಟ್ಟದ ಅರಬ್ಬರನ್ನು ಹೊರತುಪಡಿಸಿ, ಅವರಲ್ಲಿ ಎರಡು ದೊಡ್ಡ ಮತ್ತು ಪ್ರಮುಖ ಗೋತ್ರಗಳಿದ್ದವು.

ಒಬ್ಬರು ಅಕ್ ಮತ್ತು ಇನ್ನೊಬ್ಬರು ಅಶರ್. (ಹಝ್ರತ್ ಅಬುಬಕರ್(ರ) ಕೆ ಸರ್ಕಾರಿ ಖುತೂತ್, ಪುಟ-41, ಇದಾರ ಇಸ್ಲಾಮಿಯಾತ್ ಲಾಹೋರ್)

ನಮ್ಮ ಪ್ರದೇಶದಲ್ಲಿ ಧರ್ಮತ್ಯಾಗಿಗಳು ಮುಸ್ಲಿಮರ ಮೇಲೆ ದಾಳಿ ಮಾಡಿದ್ದಾರೆ ಎಂದು ಹಝ್ರತ್ ಅತ್ತಾಬ್ ಬಿನ್ ಉಸೈದ್(ರ) ಮತ್ತು ಹಝ್ರತ್ ಉಸ್ಮಾನ್ ಬಿನ್ ಅಬುಲ್ ಅಸ್(ರ) ರವರು ಹಝ್ರತ್ ಅಬುಬಕರ್(ರ) ರವರಿಗೆ ಬರೆದಿದ್ದಾರೆ ಎಂದು ತಾರೀಖ್ ತಬರಿಯಲ್ಲಿ ಬರೆಯಲಾಗಿದೆ.

ಧರ್ಮತ್ಯಾಗಿಯರು ಧರ್ಮತ್ಯಾಗಿಗಳಾಗಿ ಮಾತ್ರವಿರಲಿಲ್ಲ, ನಾನು ಈಗಾಗಲೇ ಹೇಳಿದಂತೆ, ಈ ಜನರು ಮುಸ್ಲಿಮರ ಮೇಲೆ ದಾಳಿ ಮಾಡುತ್ತಿದ್ದರು, ಇಲ್ಲಿಯೂ ಅದೇ ಪರಿಸ್ಥಿತಿ ಇತ್ತು. ಆದ್ದರಿಂದ ಹಝ್ರತ್ ಅತ್ತಾಬ್(ರ) ತಹಮಾದ ಜನರನ್ನು ನಿಗ್ರಹಿಸಲು ತನ್ನ ಸಹೋದರ ಹಝ್ರತ್ ಖಾಲಿದ್ ಬಿನ್ ಉಸೈದ್(ರ) ರನ್ನು ಕಳುಹಿಸಿದರು, ಅಲ್ಲಿ ಬಾನು ಮುದ್ಲಿಜ್ ಮತ್ತು ಖಜಾಅ ಮತ್ತು ಕಿನಾನ ಅವರ ವಿವಿಧ ಗುಂಪುಗಳು ಬನು ಮುದ್‌ಲಜ್‌ನ ಕುಟುಂಬವಾದ ಬನೂ ಶನೂನ್‌ನ ಜುಂದುಬ್ ಬಿನ್ ಸುಲ್ಮಾ ಅವರ ನೇತೃತ್ವದಲ್ಲಿ ಧರ್ಮತ್ಯಾಗಿಗಳಾಗಿ ಹೋರಾಡಲು ಒಗ್ಗೂಡಿದರು. ಇಬ್ಬರು ಗುಂಪುಗಳು ಮುಖಾಮುಖಿಯಾದರು ಮತ್ತು ಹಝ್ರತ್ ಖಾಲಿದ್ ಬಿನ್ ಉಸೈದ್(ರ) ಅವರನ್ನು ಸೋಲಿಸಿದರು ಮತ್ತು ಅವರನ್ನು ಚದುರಿಸಿದರು ಮತ್ತು ಅನೇಕ ಜನರನ್ನು ಕೊಂದರು. ಅದರಲ್ಲಿ ಬನು ಶಾನೂಕ್‌ನ ಜನರು ಹೆಚ್ಚು ಕೊಲ್ಲಲ್ಪಟ್ಟರು. ಈ ಘಟನೆಯ ನಂತರ ಅವರ ಸಂಖ್ಯೆ ತೀರಾ ಕಡಿಮೆಯಾಯಿತು. ಈ ಘಟನೆಯು ಧರ್ಮಭ್ರಷ್ಟತೆಯ ಪ್ರಲೋಭನೆಯಿಂದ ಹಝ್ರತ್ ಅತ್ತಾಬ್(ರ)ರ ಪ್ರದೇಶವನ್ನು ಶುದ್ಧೀಕರಿಸಿತು ಮತ್ತು ಜುಂದುಬ್‌ಗೆ ಓಡಿಹೋದರು. ನಂತರ ಸ್ವಲ್ಪ ಸಮಯದ ನಂತರ ಅವರು ಮತ್ತೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. (ತಾರೀಖ್ ಅಲ್-ತಬರಿ, ಸಂಪುಟ-2, ಪುಟ-294, ದಾರ್ ಅಲ್-ಕಿತಾಬ್ ಅಲ್-ಇಲಾಮಿಯಾ ಲೆಬನಾನ್ 2012 ರಿಂದ ಪ್ರಕಟಿಸಲಾಗಿದೆ)

ಒಂದು ವರದಿಯ ಪ್ರಕಾರ ಪೈಗಂಬರ್(ಸ) ರವರ ನಿಧನದ ನಂತರ ತಿಹಾಮದಲ್ಲಿ ಅಕ್ ಮತ್ತು ಅಶ್‌ಅರ್‌ರವರು ಪಿರೂರುಯನ್ನು ಹುಟ್ಟಿಸಿದರು. ಅದರ ವಿವರ ಹೀಗಿದೆ: ಅವರು ಪೈಗಂಬರ್(ಸ)ರವರ ನಿಧನದ ಸುದ್ದಿ ಕೇಳಿದಾಗ ಅವರಲ್ಲಿ ವಿವಿಧ ಜನರು ಜಮಾಯಿಸಿದರು ಮತ್ತು ನಂತರ ಖಜಮ್ ಬುಡಕಟ್ಟಿನ ಜನರು ಸಹ ಅವರೊಂದಿಗೆ ಬಂದು ಸೇರಿಕೊಂಡರು. ಅವರು ಕರಾವಳಿಯ ಸಮೀಪವಿರುವ ಆಲಾಬ್‌ನಲ್ಲಿ ಬೀಡುಬಿಟ್ಟರು ಮತ್ತು ಅವರೊಂದಿಗೆ ನಾಯಕರಿಲ್ಲದ ಸೈನಿಕರು ಬಂದು ಸೇರಿದರು. ಆಲಾಬ್ ಮಕ್ಕಾದ ಕರಾವಳಿಯ ನಡುವಿನ ಅಕ್ ಗೋತ್ರದ ಪ್ರದೇಶವಾಗಿದೆ. ಹಝ್ರತ್ ತಾಹಿರ್ ಬಿನ್ ಅಬು ಹಾಲ(ರ) ಅವರು ಹಝ್ರತ್ ಅಬೂಬಕರ್(ರ) ಅವರಿಗೆ ಈ ಬಗ್ಗೆ ಮಾಹಿತಿ ನೀಡಿದರು ಮತ್ತು ಅವರೇ ಅವರನ್ನು ನಿಗ್ರಹಿಸಲು ಹೊರಟರು ಮತ್ತು ಅವರು ತಮ್ಮ ನಿರ್ಗಮನದ ಬಗ್ಗೆ ಹಝ್ರತ್ ಅಬೂಬಕರ್(ರ) ಅವರಿಗೆ ಪತ್ರ ಬರೆದರು. ಹಝ್ರತ್ ತಾಹಿರ್ ಜೊತೆಯಲ್ಲಿ ಮಸ್ರೂಕ್ ಅಕ್ಕಿ ಮತ್ತು ಧರ್ಮಭ್ರಷ್ಟರಾಗದ ಅಕ್ಕ್ ಬುಡಕಟ್ಟಿನ ಅವರ ಜನರು ಇದ್ದರು. ಅವರು ಈ ಜನರನ್ನು ಆಲಾಬ್‌ನಲ್ಲಿ ಭೇಟಿಯಾದರು ಮತ್ತು ಅವರೊಂದಿಗೆ ಭೀಕರ ಯುದ್ಧದ ನಂತರ ಅಲ್ಲಾಹನು ಆ ಜನರನ್ನು, ಶತ್ರುಗಳನ್ನು ಸೋಲಿಸಿದನು. ಮುಸ್ಲಿಮರು ಯಾವುದೇ ಹಿಂಜರಿಕೆಯಿಲ್ಲದೆ ಅವರನ್ನು ಕೊಂದರು. ಅವರ ಹತ್ಯೆಯ ದುರ್ವಾಸನೆಯು ಎಲ್ಲಾ ದಿಕ್ಕುಗಳಲ್ಲಿಯೂ ಹರಡಿತು ಮತ್ತು ಮುಸ್ಲಿಮರು ಅದ್ಭುತ ವಿಜಯವನ್ನು ಗಳಿಸಿದರು.

ತಹಾಮ ನಿವಾಸಿಗಳ ಧರ್ಮತ್ಯಾಗ ಮತ್ತು ದಂಗೆಯ ಸ್ಥಿತಿಗತಿಗಳು ಹಾಗೂ ಘಟನೆಗಳ ಬಗ್ಗೆ ವಿವರಿಸುತ್ತಾ ಒಬ್ಬ ಲೇಖಕ ಬರೆಯುತ್ತಾರೆ: ಇಲ್ಲಿ ಧರ್ಮತ್ಯಾಗವನ್ನು ತುಳಿದುಹಾಕಲು ಮುಂದೆ ಇದ್ದ ವ್ಯಕ್ತಿಗಳ ಹೆಸರುಗಳಲ್ಲಿ ಮೊದಲು ತಾಹಿರ್ ಬಿನ್ ಅಬೀ ಹಾಲ(ರ)ರದ್ದಾಗಿದೆ. ಹಝ್ರತ್ ಪೈಗಂಬರ್(ಸ) ಅವರನ್ನು ತಹಾಮದ ಭಾಗದಲ್ಲಿ ಅಧಿಕಾರಿಯನ್ನಾಗಿ ಮಾಡಿದ್ದರು. ಹಝ್ರತ್ ಅಬೂಬಕರ್(ರ) ಹಿಝ್ರೇ ಮೌತಿನಲ್ಲಿರುವ ಸುಕೂನ್ ಮತ್ತು ಸಕಾಸಕಿನ ಅಧಿಕಾರಿಯಾದ ಉಕಾಶ ಬಿನ್ ಸೌರಿಗೆ ಹೀಗೆ ಆದೇಶ ನೀಡಿದರು: "ನೀವು ತಹಾಮದಲ್ಲಿ ತಂಗಿರಿ ಮತ್ತು ನಿಮ್ಮ ಸಮೀಪದಲ್ಲಿ ಅದರ ನಿವಾಸಿಗಳನ್ನು ಒಟ್ಟುಸೇರಿಸಿ ಆದೇಶಕ್ಕಾಗಿ ಕಾಯಿರಿ." ಬಜೀಲ ಗೋತ್ರದ ಬಳಿಗೆ ಹಝ್ರತ್ ಅಬೂಬಕರ್(ರ) ಜರೀರ ಬಿನ್ ಅಬ್ದುಲ್ಲಾಹ್ ಬಜಲಿರನ್ನು ಮರಳಿ ಕಳುಹಿಸಿದರು. ತನ್ನ ಕೋಮಿನಲ್ಲಿ ಸ್ಥಿರಚಿತ್ತರಾದ ಮುಸ್ಲಿಮರನ್ನು ಕರೆದುಕೊಂಡು ಹೋಗಿ ಇಸ್ಲಾಂ ಧರ್ಮತ್ಯಾಗ ಮಾಡಿದ್ದವರ ವಿರುದ್ಧ ಯುದ್ಧ ಮಾಡಿದ ನಂತರ ಖಸ್‌ಅಮ್ ಗೋತ್ರದ ಬಳಿಗೆ ತಲುಪಿ ಅವರಲ್ಲಿರುವ ಧರ್ಮತ್ಯಾಗಿಗಳ ವಿರುದ್ಧ ಯುದ್ಧ ಮಾಡಲು ಅವರಿಗೆ ಆದೇಶ ನೀಡಿದರು. ಹೀಗೆ ಅವರು ತನ್ನ ಕಾರ್ಯಾಚರಣೆ ನಡೆಸಲು ಹೊರಟರು ಮತ್ತು ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಆದೇಶವನ್ನು ಪಾಲಿಸಿದರು. ಸ್ವಲ್ಪವೇ ಜನರ ಹೊರತು ಮುಸ್ಲಿಮರನ್ನು ಎದುರಿಸಲು ಯಾರೂ ಮುಂದೆ ಬರಲಿಲ್ಲ. ಬಂದವರನ್ನು ವಧಿಸಿದರು. ಉಳಿದವರು ಪರಾರಿಯಾದರು. (ತರೀಖ್ ಅಲ್-ತಬರಿ, ಸಂಪುಟ-2, ಪುಟಗಳು 294-295, ದಾರ್ ಅಲ್-ಕಿತಾಬ್ ಅಲ್-ಇಲಮಿಯಾ ಲೆಬನಾನ್ 2012) (ಅಲ್-ಕಮಲ್ ಫಿ ಅಲ್-ತಾರೀಖ್, ಸಂಪುಟ-2, ಪುಟ-230, ದಾರ್-ಅಲ್-ಕಿತಾಬ್ ಅಲ್-ಇಲಮಿಯಾ ಲೆಬನಾನ್) (ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ. ಅಲಿ ಮುಹಮ್ಮದ್ ಸಲಬಿ ಅವರಿಂದ ಅನುವಾದಿಸಲಾಗಿದೆ, ಪುಟ-303, ಮಕ್ತಾಬ್ ಅಲ್-ಫುರ್ಕಾನ್ ಮುಜಾಫರ್ಗಢ್ ಪಾಕಿಸ್ತಾನ್) (ಮುಜಮುಲ್ ಬಲದಾನ್, ಸಂಪುಟ-1, ಪುಟ-263)

ಈ ಅಭಿಯಾನಗಳನ್ನು ಪ್ರಸ್ತಾಪಿಸಲಾಗುತ್ತಿದೆ, ಇನ್‌ಶಾಅಲ್ಲಾಹ್ ಮುಂದೆ ಹನ್ನೊಂದನೇ ಅಭಿಯಾನವನ್ನು ಉಲ್ಲೇಖಿಸಲಾಗುವುದು.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅವರಲ್ಲಿ ಇಬ್ಬರು ಬುರ್ಕಿನಾಫಾಸೋದ ಡೋರಿ ರೀಜನಿನ ಎರಡು ಯುವಕರಾಗಿರುವರು. ಜೂನ್ 11ರಂದು ಡೋರಿ ರೀಜನಿನ ಒಂದು ಗ್ರಾಮದಲ್ಲಿ ಭಯೋತ್ಪಾದಕರು ದಾಳಿ ನಡೆಸಿದರು. ಅಲ್ಲಿಯ ಅನೇಕರು ಸಾವನ್ನಪ್ಪಿದರು. ಅವರಲ್ಲಿ ನಮ್ಮ ಈ ಇಬ್ಬರೂ ಅಹ್ಮದಿ ಖಾದಿಮರು ಸಹ ಶಹೀದ್ ಆದರು. ಅವರು ತಮ್ಮ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಫೈರಿಂಗ್ ನಡೆದಾಗ, ಸ್ಥಳದಲ್ಲೇ ಅವರು ಮೃತಪಟ್ಟರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಲ್ಲಿ ಒಬ್ಬರ ಹೆಸರು ಸನ್ಮಾನ್ಯ ಡೇಕೋ ಝಕರಿಯಾ ಸಾಹಿಬ್ ಎಂದಾಗಿದೆ. ಅವರಿಗೆ 32 ವರ್ಷ ಪ್ರಾಯವಿತ್ತು. ಡೋರಿ ರೀಜನಿನಲ್ಲಿ ಖುದ್ದಾಮುಲ್ ಅಹ್ಮದಿಯಾದ ರೀಜನಲ್ ಖಾಇದಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಮದ್ರಸತುಲ್ ಹಿಫ್ಜ್ ಘಾನದಲ್ಲಿ ಪವಿತ್ರ ಖುರ್‌ಆನ್ ಕಂಠಪಾಠ ಮಾಡಲು ಹೋಗಿದ್ದರು. ಸ್ವಲ್ಪ ಕಾಲದ ನಂತರ ಮರಳಿ ಬಂದರು. ಸದಾ ಜಮಾಅತಿನ ಕೆಲಸಕ್ಕಾಗಿ ಹಾಜರಾಗುತ್ತಿದ್ದರು. ಎಲ್ಲ ಕೆಲಸಕ್ಕಾಗಿ ತಯಾರಾಗಿಕೊಂಡು ಮುಂದೆ ಬರುತ್ತಿದ್ದರು. ಐದು ಹೊತ್ತಿನ ನಮಾಝನ್ನು ಪಾಲಿಸುತ್ತಿದ್ದರು. ತಹಜ್ಜುದ್

ಮತ್ತು ನಫ್ಲ್ ನಮಾಝುಗಳನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ತನ್ನ ಚಂದಾಗಳನ್ನು ಸಹ ಕರಾರುವಕ್ಕಾಗಿ ನೀಡುತ್ತಿದ್ದರು. ಮಾಸಿಕ ಆದಾಯದ ಹೊರತು ಕೂಡ ಬೇರೆ ಏನಾದರೂ ಆದಾಯ ಲಭಿಸಿದರೆ, ಅದರ ಮೇಲೂ ಚಂದ ಕೊಡುತ್ತಿದ್ದರು. ಜಮಾಅತ್ ಮತ್ತು ಖಿಲಾಫತಿನೊಂದಿಗೆ ನೈಜವಾದ ಪ್ರೇಮವಿತ್ತು. ನಿಯತವಾಗಿ ಖುತ್ಬಗಳನ್ನು ಆಲಿಸುತ್ತಿದ್ದರು. ಎಂ.ಟಿ.ಎ.ದ ಇತರ ಪ್ರೋಗ್ರಾಮುಗಳನ್ನು ಬಹಳ ಆಸಕ್ತಿಯಿಂದ ನೋಡುತ್ತಿದ್ದರು. ಲೋಕಲ್ ಮಿಶನರಿ ಹೇಳುತ್ತಾರೆ. ಅವರಿಗೆ ಖಲೀಫತುಲ್ ಮಸೀಹ್‌ರನ್ನು ಭೇಟಿಯಾಗಲು ಬಹಳ ಬಯಕೆಯಿತ್ತು. ಒಬ್ಬ ಮಾದರಿ ಖಾದಿಮ್ ಆಗಿದ್ದರು. ದಿವಂಗತರು ಪತ್ನಿಯನ್ನಲ್ಲದೇ ಇಬ್ಬರು ಪುತ್ರಿಯರನ್ನು ಮತ್ತು ಒಬ್ಬ ಮಗನನ್ನು ಅಗಲಿರುವರು.

ಎರಡನೇ ಶಹೀದ್ ಸನ್ಮಾನ್ಯ ಡೇಕೋ ಮೂಸಾ ಸಾಹಿಬ್ ಆಗಿದ್ದಾರೆ. ಅವರಿಗೆ 34 ವರ್ಷ ಪ್ರಾಯವಿತ್ತು. ಅವರು ಸಾಯಿ ತಂಗಾ ಮಜ್ಲಿಸಿನ ಖುದ್ದಾಮುಲ್ ಅಹ್ಮದಿಯಾ ಖಾಇದ್ ಆಗಿದ್ದರು. ತನ್ನ ಜಮಾಅತಿನ ಎಲ್ಲ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಇತರರನ್ನು ಕೂಡ ಸೇರಿಸುತ್ತಿದ್ದರು. ನಮಾಝ್‌ಗಳಲ್ಲಿ ಮತ್ತು ಚಂದಗಳಲ್ಲಿ ಕರಾರುವಕ್ಕಾಗಿ ಇದ್ದರು. ಅವರ ಜಮಾಅತಿನಲ್ಲಿ ಮಸೀದಿ ಇರಲಿಲ್ಲ. ಆದ್ದರಿಂದ ಅಲ್ಲೊಂದು ಶೆಡ್ ಮಾಡಿಕೊಂಡು ನಿಯತವಾಗಿ ನಮಾಝ್ ಮಾಡುವ ವ್ಯವಸ್ಥೆ ಮಾಡಲು ಪ್ರಯತ್ನಿಸುತ್ತಿದ್ದರು. ನಿಯತವಾಗಿ ನನಗೆ ಪತ್ರ ಕೂಡ ಬರೆಯುತ್ತಿದ್ದರು. ದಿವಂಗತರು ಎರಡು ಪತ್ನಿಯರನ್ನು ಮತ್ತು ಮೂರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಮಗ್‌ಫಿರತ್ ಮತ್ತು ಕರುಣೆಯಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ.

ಜಮಾಅತಿನ ಅಮೀರ್ ಸಾಹಿಬ್ ಬರೆಯುತ್ತಾರೆ: ಈ ಇಬ್ಬರೂ ಯುವಕರು ರೇಡಿಯೋ ಅಹ್ಮದಿಯಾ ಡೋರಿಯ ಇಂಚಾರ್ಜ್ ಆಗಿರುವ ಲೋಕಲ್ ಮಿಶನರಿ ಡೇಕೋ ಅಹ್ಮದ್ ಬೋರೀಮ ಸಾಹಿಬ್‌ರ ಸಹೋದರರರಾಗಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆ ಇಬ್ರಾಹೀಂ ಬುಂತಿ ಸಾಹಿಬ್‌ರ ಮೂಲಕ ಪ್ರವೇಶಿತ್ತು. ಅವರು ಬಹಳ ನಿಷ್ಠಾವಂತ ಮತ್ತು ಆವೇಶಭರಿತ ದಾಇ ಇಲ್ಲಾಹ್ ಆಗಿದ್ದರು. ಡೋರಿ ರೀಜನಿನ ಝುಈಮ್ ಅನ್ಸಾರುಲ್ಲಾಹ್ ಕೂಡ ಆಗಿದ್ದರು. 2011ರಲ್ಲಿ ನಿಧನರಾಗಿದ್ದರು. ಅಮೀರ ಸಾಹಿಬ್ ದುಆಗಾಗಿಯೂ ಬರೆದಿದ್ದಾರೆ. ಬುರ್ಕಿನಾಫಾಸೋದಲ್ಲಿ 2015ರಿಂದ ಭಯೋತ್ಪಾದಕ ದಾಳಿಗಳು ನಡೆಯುತ್ತಿವೆ. ದೇಶದ ಉತ್ತರ ದಿಕ್ಕಿನಲ್ಲೂ ಬಹಳ ನಾಶನಷ್ಟಗಳು ಉಂಟಾಗಿವೆ. 2 ಮಿಲಿಯನ್‌ಗಿಂತ ಹೆಚ್ಚಿನ ಜನರಿಗೆ ಮನೆಯಿಲ್ಲ. ಅಲ್ಲಾಹನು ಅವರಿಗೂ ನೆಮ್ಮದಿಯ ಸ್ಥಿತಿಗಳು ಉಂಟುಮಾಡಲಿ. ಲೋಕದಲ್ಲಿ ಆಗುತ್ತಿರುವ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗಳಿಂದ ಭಯೋತ್ಪಾದನೆಯ ಸಾಧ್ಯತೆಗಳು ಇನ್ನೂ ಹೆಚ್ಚಾಗುತ್ತಿವೆ. ಅಲ್ಲಾಹನೇ ಮನುಷ್ಯರ ಮೇಲೆ ಕರುಣೆದೋರಲಿ. ಅವರಿಗೆ ಬುದ್ಧಿ ಕೊಡಲಿ.

ಮತ್ತೊಂದು ಪ್ರಸ್ತಾಪ ದಿವಂಗತರಾದ ಉಮರ್ ಕೋಟ್ ಜಿಲ್ಲೆಯ ಸಾದಿಕ್ ಗ್ರಾಮದ ಮುಕರ್ರಂ ಮುಹಮ್ಮದ್ ಯೂಸುಫ್ ಬಲೋಚ್ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳಿಗೆ ಮುಂಚೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. 1934ರಲ್ಲಿ ಹಝ್ರತ್ ಗುಲಾಂ ರಸೂಲ್ ರಾಜೀಕಿ ಸಾಹಿಬ್‌ರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಪಾಕಿಸ್ತಾನದ ಸ್ಥಾಪನೆಯ ನಂತರ ವಲಸೆ ಮಾಡಿ ಅವರು ತಹ್ರೀಕ್ ಜದೀದಿನ ಭೂಪ್ರದೇಶಕ್ಕೆ ಬಂದರು. ಸಾದಿಕ್ ಉಮರ್‌ಕೋಟ್‌ನಲ್ಲಿ. ಆರು ವರ್ಷಗಳ ತನಕ ರಬ್ವದಲ್ಲೂ ಇದ್ದರು. ಆ ಮೊಹಲ್ಲದಲ್ಲಿ ಮಸ್ಜಿದ್ ಖಾದಿಮ್ ಆಗಿ ಸೇವೆ ಸಲ್ಲಿಸಲು ಅವರಿಗೆ ಸೌಭಾಗ್ಯ ಲಭಿಸಿತು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ದಿವಂಗತರು ಪತ್ನಿಯನ್ನಲ್ಲದೇ ಏಳು ಪುತ್ರರನ್ನು ಮತ್ತು ನಾಲ್ವರು ಪುತ್ರಿಯರನ್ನು ಅಗಲಿರುವರು. ಅವರ ಒಬ್ಬ ಮಗನಾದ ಶಬೀರ್ ಅಹ್ಮದ್ ಸಾಹಿಬ್ ಮುಬಲ್ಲಿಗ್ ಆಗಿರುವರು. ಈಗ ಐವರಿಕೋಸ್ಟಿನಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆಯುತ್ತಿದ್ದಾರೆ. ಕರ್ಮ ಮೈದಾನದಲ್ಲಿ ಇರುವ ಕಾರಣದಿಂದ ತಂದೆಯ ಜನಾಝದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ. ದಿವಂಗತರ ಇಬ್ಬರು ಮೊಮ್ಮಕ್ಕಳು ಕೂಡ ಮುಬಲ್ಲಿಗ್ ಆಗಿರುವರು.

ಅವರ ಮಗನಾದ ಶಬೀರ್ ಸಾಹಿಬ್ ಬರೆಯುತ್ತಾರೆ: ಅನೇಕ ಗುಣವೈಶಿಷ್ಟ್ಯಗಳನ್ನು ಹೊಂದಿದ್ದರು. ಸಣ್ಣಂದಿನಿಂದಲೇ ತಹಜ್ಜುದ್ ನಿರ್ವಹಿಸುವುದಾಗಿ ಕಂಡಿದ್ದೇನೆ. ದಿನಾಲೂ ಫಜ್ರ್ ನಮಾಝಿನ ನಂತರ ಉಚ್ಚಸ್ವರದಲ್ಲಿ ತಿಲಾವತ್ ಮಾಡುತ್ತಿದ್ದರು. ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೇಮವಿತ್ತು. ನಾನು ಮನೆಗೆ ಹೋಗುವಾಗಲೆಲ್ಲ ನನ್ನನ್ನು ಕರೆದು ಹೀಗೆ ಹೇಳುತ್ತಿದ್ದರು: ನನ್ನ ಎರಡು ಮಾತುಗಳನ್ನು ಸದಾ ನೆನಪಿಡಿರಿ. ಖಿಲಾಫತಿನೊಂದಿಗೆ ಸದಾ ನಿಷ್ಠವಾಗಿರು ಮತ್ತು ವಖ್ಫನ್ನು ಸರಿಯಾಗಿ ನಿಭಾಯಿಸು. ಬಹಳ ಅತಿಥಿ ಸತ್ಕಾರಿಯೂ ಆಗಿದ್ದರು. ರಸ್ತೆಯಲ್ಲಿ ಭೇಟಿಯಾಗುವ ಜನರನ್ನು ಕೂಡ ಮನೆಗೆ ಕರೆದುಕೊಂಡು ಬರುತ್ತಿದ್ದರು. ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ಅಹ್ಮದಿಯೇತರ ಮುಸ್ಲಿಮರು ಮತ್ತು ಹಿಂದೂ ಮುಂತಾದವರು ಕೂಡ ಬಂದಿದ್ದರು. ಬಹಳ ಉತ್ತಮ ಮಾತುಗಳೊಂದಿಗೆ ಅವರನ್ನು ಸ್ಮರಿಸಿದರು. ನಮ್ಮ ತಂದೆ ಮೃತಪಟ್ಟಿರುವರು ಎಂದು ಕೂಡ ಕೆಲವರು ಹೇಳಿದರು. ಏಕೆಂದರೆ ಬಡವರ ಸಹಾಯವನ್ನು ಅವರು ಮಾಡುತ್ತಿದ್ದರು.

ಮೂರನೇ ಜನಾಝ ರಬ್ವದ ವಖ್ಫೇ ನೌ ಆದ ಸನ್ಮಾನ್ಯ ಮುಬಾರಿಝ ಫಾರೂಖ್ ಸಾಹಿಬರದ್ದಾಗಿದೆ. ರಬ್ವದ ಫಾರೂಖ್ ಅಹ್ಮದ್ ಸಾಹಿಬ್‌ರ ಮಗಳಾಗಿದ್ದರು. ಕೆಲವು ದಿನಗಳಿಗೆ ಮುಂಚೆ ನಿಧನಳಾದಳು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಈ ಮಗಳಿಗೆ ಹನ್ನೊಂದು ವರ್ಷ ಪ್ರಾಯವಿದ್ದಾಗ, ವಿದ್ಯುತ್ತಿನ ಹೈ ಟೆನ್ಶನ್ ವೈರನ್ನು ಮುಟ್ಟಿದ ಕಾರಣದಿಂದ ಎರಡೂ ಕೈಗಳು ಮಫ್ಲೂಜ್ ಆಗಿದ್ದುವು. ಆದ್ದರಿಂದ ಎರಡೂ ಕೈಗಳನ್ನೂ ಕತ್ತರಿಸಬೇಕಾಯಿತು. ಆದರೆ ಈ ಸ್ಥಿತಿಯಲ್ಲೂ ಅವಳು ಧೈರ್ಯಗೆಡಲಿಲ್ಲ. ತನ್ನ ಕಲಿಕೆಯನ್ನು ಜಾರಿಯಲ್ಲಿರಿಸಿದಳು. ಮೊದಲು ಅವಳು ಬಾಯಿಯಿಂದ ಲೇಖನಿಯನ್ನು ಹಿಡಿದು ಬರೆಯಲು ಪ್ರಾಕ್ಟೀಸ್ ಮಾಡಿದಳು. ಅನಂತರ ಎರಡೂ ಮೊಣಕೈಗಳಿಂದ ಲೇಖನಿ ಹಿಡಿದು ಬರೆಯಲು ಅಭ್ಯಾಸ ಮಾಡಿಕೊಂಡಳು. ಹೀಗೆ ಕೆಲವೇ ತಿಂಗಳಲ್ಲಿ ಬಹಳ ಉತ್ತಮವಾಗಿ ಬರೆಯಲು ಶುರುಮಾಡಿದಳು. ಕಲಿಕೆಯನ್ನು ಮುಂದುವರೆಸಿದಳು. ಕೆಲವು ಕಾಲದ ನಂತರ ಈ ಕುಟುಂಬ ರಬ್ವಗೆ ಶಿಫ್ಟ್ ಆಯಿತು. ಇಲ್ಲೂ ತನ್ನ ಕಲಿಕೆಯನ್ನು ಜಾರಿಯಲ್ಲಿರಿಸಿದಳು. 2013ರಲ್ಲಿ ಉತ್ತಮ ಅಂಕಗಳೊಂದಿಗೆ ಬಿ.ಎ. ಪಾಸ್ ಮಾಡಿದಳು. ಅನಂತರ ತಾಲೀಮುಲ್ ಇಸ್ಲಾಂ ಕಾಲೇಜಿನಲ್ಲಿ ಎಂ.ಎ. ಅರಬಿ ಕೂಡ ಮಾಡಿದಳು. ವಖ್ಫೇ ನೌ ಎಂಬ ನೆಲೆಯಲ್ಲಿ ಕೆಲವು ಕಾಲದ ವರೆಗೆ ತಾಹಿರ್ ಇನ್‌ಸ್ಟಿಟ್ಯೂಟ್‌ನಲ್ಲೂ ಸೇವೆ ಸಲ್ಲಿಸಿದಳು. ಪವಿತ್ರ ಖುರ್‌ಆನನ್ನು ಉಚ್ಚಾರಣೆಯೊಂದಿಗೆ ಮತ್ತು ಪದಗಳ ಅರ್ಥಗಳೊಂದಿಗೆ ಕಲಿತಳು. ಸದಾ ಶೇಕಡ ನೂರರಷ್ಟು ನಂಬರ್ ಪಡೆಯುತ್ತಿದ್ದಳು. ಮೊಹಲ್ಲದಲ್ಲಿ ತರ್ಜುಮತುಲ್ ಖುರ್‌ಆನ್ ಕ್ಲಾಸ್ ಕೂಡ ತೆಗೆಯುತ್ತಿದ್ದಳು. ಅವಳು ತನ್ನ ತಂದೆಯನ್ನಲ್ಲದೇ ಇಬ್ಬರು ಸಹೋದರರನ್ನು ಮತ್ತು ಇಬ್ಬರು ಸಹೋದರಿಗಳನ್ನು ಅಗಲಿರುವಳು. ಅಲ್ಲಾಹನು ಅವಳೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದೊಂದಿಗೆ ವರ್ತಿಸಲಿ. ಅವರ ತಂದೆ ತಾಯಂದಿರಿಗೆ ಸಹನೆ ಮತ್ತು ಧೈರ್ಯವನ್ನು ನೀಡಲಿ.

ಮುಂದಿನ ಪ್ರಸ್ತಾಪ ಐವರಿಕೋಸ್ಟಿನ ಮಾಸಾದಾಗೋ ಪ್ರದೇಶದ ಲೋಕಲ್ ಮುಅಲ್ಲಿಂ ಆದ ಸನ್ಮಾನ್ಯ ಆನ್‌ಝೂ ಮಾನಾ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳಿಗೆ ಮುಂಚೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಬಹಳವಾಗಿ ನಫ್ಲ್ ನಮಾಝ್‌ಗಳನ್ನು ನಿರ್ವಹಿಸುತ್ತಿದ್ದರು. ಸೋಮವಾರ ಮತ್ತು ಗುರುವಾರದಂದು ನಿಯತವಾಗಿ ಉಪವಾಸ ಇರಿಸುತ್ತಿದ್ದರು. ಹೆಚ್ಚಾಗಿ ಅವರ ದುಆಗಳು ಸ್ವೀಕಾರವಾಗುತ್ತಿದ್ದುವು. ಖಿಲಾಫತಿನೊಂದಿಗೆ ಅವರಿಗೆ ಅಪರಿಮಿತವಾದ ಪ್ರೀತಿಯಿತ್ತು. ಅತ್ಯುತ್ತಮ ಮುಬಲ್ಲಿಗ್ ಆಗಿದ್ದರು. 1997ರಲ್ಲಿ ಒಂದು ಕನಸಿನ ಆಧಾರದಲ್ಲಿ ಅವರು ಅಹ್ಮದಿಯ್ಯತ್ ಸ್ವೀಕಾರ ಮಾಡಿದ್ದರು. ಕನಸಿನಲ್ಲಿ ಹೀಗೆ ಕಂಡರು: ಒಂದು ಕಾಡಿನಲ್ಲಿ ಅವರು ಇದ್ದರು. ಅಲ್ಲಿಂದ ನಾಸಿಯಾನ್ ಎಂಬ ಗ್ರಾಮಕ್ಕೆ ಹೋಗುತ್ತಿದ್ದರು. ಒಂದು ಖಡ್ಗದ ಸಹಾಯದಿಂದ ಅಲ್ಲಿಗೆ ಹೋಗಲು ರಸ್ತೆ ಮಾಡುತ್ತಿದ್ದರು. ಅದರೊಂದಿಗೆ ಉಚ್ಚ ಸ್ವರದಲ್ಲಿ ಕಲಿಮ ತಯ್ಯಿಬ ಓದುತ್ತಿದ್ದರು. ಈ ಕನಸಿನ ನಂತರ, ನಾಸಿಯಾನ್ ಗ್ರಾಮದಲ್ಲಿ ಒಬ್ಬ ಅಹ್ಮದೀ ಮಿಶನರಿಯಾದ ಉಮರ್ ಮಆಝ್ ಸಾಹಿಬ್‌ರು ತಬ್ಲೀಗ್ ಮಾಡಲು ಬಂದಿರುವರು ಎಂದು ಅವರಿಗೆ ತಿಳಿದುಬಂತು. ಹೀಗೆ ಸ್ವತಃ ನಾಸಿಯಾನಿಗೆ ಹೋದರು. ಅಹ್ಮದಿಯ್ಯತ್ತಿನ ಸಂದೇಶ ಆಲಿಸುತ್ತಲೇ ಬೈಅತ್ ಮಾಡಿದರು. ಇದೇ ಸಂದೇಶವನ್ನು ಸ್ವೀಕಾರ ಮಾಡಲು ಅಲ್ಲಾಹನು ನನಗೆ ಕನಸಿನ ಮೂಲಕ ತಿಳಿಸಿದ್ದನು ಎಂದು ಹೇಳಿದರು. ಹೇಗಿದ್ದರೂ ಅಹ್ಮದಿಯ್ಯತ್ ಸ್ವೀಕಾರ ಮಾಡಿದ ನಂತರ ಸ್ವಲ್ಪ ಕಾಲದ ನಂತರ ಮುಅಲ್ಲಿಂ ಆಗಿ ಅವರು ವಖ್ಫ್ ಮಾಡಿದರು. ಜಮಾಅತಿನ ಸೇವೆ ಶುರುಮಾಡಿದರು. 2002ರಲ್ಲಿ ಅಲ್ಲಿ ಆಂತರಿಕ ಯುದ್ಧ ಶುರುವಾದಾಗ ಅವರ ಜಾಗದಿಂದ ಕೇಂದ್ರದೊಂದಿಗೆ ಸಂಪರ್ಕವಿರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಜಮಾಅತಿನ ಸದಸ್ಯರಿಗಾಗಿ ತಾಲೀಂ ಮತ್ತು ತರಬೇತಿಯ ಕೆಲಸಗಳನ್ನು ಹೇಗಿದ್ದರೂ ಮುಂದುವರೆಸಿದರು. ಕೇಂದ್ರದ ಸಂಪರ್ಕದಲ್ಲಿ ಇದ್ದರು. ಹೀಗೆ ಅವರು ತಮ್ಮ ಗ್ರಾಮದಲ್ಲಿ ತನ್ನ ಮನೆಯ ಅಂಗಳದಲ್ಲೇ ಮಸೀದಿ ನಿರ್ಮಾಣ ಮಾಡಿದರು. ಅಲ್ಲಿಂದಲೇ ಜಮಾಅತಿನ ಸದಸ್ಯರಿಗಾಗಿ ತಾಲೀಂ ಮತ್ತು ತರಬೇತಿಯ ಕೆಲಸ ಮಾಡುತ್ತಿದ್ದರು. ಈ ರೀತಿಯಾಗಿ ನ್ಯಾಶನಲ್ ಮಟ್ಟದಲ್ಲೂ ಜಮಾಅತಿನ ಪ್ರತಿಯೊಂದು ಕಾರ್ಯಕ್ರಮಗಳಲ್ಲೂ ನಿಯತವಾಗಿ ದೀರ್ಘವಾದ ಯಾತ್ರೆಗಳನ್ನು ಮಾಡಿ ಭಾಗಿಯಾಗುತ್ತಿದ್ದರು. 1998ರಲ್ಲಿ

ಅವರಿಗೆ ಯು.ಕೆ.ಯ ಜಲ್ಸ ಸಾಲಾನದಲ್ಲಿ ಭಾಗಿಯಾಗಲು ಸಂದರ್ಭ ಸಿಕ್ಕಿತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್)ರನ್ನು ಭೇಟಿಯಾಗಲು ಸೌಭಾಗ್ಯ ಲಭಿಸಿತು. ಹುಝೂರಿನ ಎಂ.ಟಿ.ಎ. ಪ್ರೋಗ್ರಾಮ್‌ದ ಫ್ರಂಚ್ ಮೀಟಿಂಗ್ ಇತ್ತು. ಅದರಲ್ಲೂ ಭಾಗವಹಿಸಲು ಅವಕಾಶ ಸಿಕ್ಕಿತು. ಈ ಭೇಟಿಯಿಂದ ಬಹಳ ಸಂತುಷ್ಟರಾಗಿದ್ದರು. ಈ ಭೇಟಿ ನನ್ನ ಜೀವಿತದ ಅತ್ಯಂತ ಸುಂದರವಾದ ಭಾಗವಾಗಿದೆ. ಅದನ್ನು ನನಗೆ ವಿವರಿಸಲು ಸಾಧ್ಯವಲ್ಲವೆಂದು ಎಂದು ಜನರೊಡನೆ ಹೇಳುತ್ತಿದ್ದರು. 2004ರಲ್ಲಿ ನಾನು ಬುರ್ಕಿನಾಫಾಸೋಕ್ಕೆ ಹೋದಾಗ, ಅವರು ನನ್ನನ್ನು ಭೇಟಿಯಾಗಿದ್ದರು. ಅವರು ಹೀಗೆ ನನ್ನೊಡನೆ ಹೇಳಿದರು: ನಾನು ನಿಮ್ಮನ್ನು ಈ ಜೀವಿತದಲ್ಲಿ ಭೇಟಿಯಾಗುವುದು ಒಂದು ಹೊಸ ಜೀವಿತ ನನಗೆ ಲಭಿಸಿದ ಕಾರಣದಿಂದಾಗಿದೆ. ನೀವು ಇಲ್ಲಿಗೆ ಬಂದ ಕಾರಣದಿಂದ ಅಲ್ಲಾಹನು ನನ್ನ ಮೇಲೆ ಕೃಪೆದೋರಿದನು. ಈ ಅನುಗ್ರಹ ನನಗೆ ಲಭಿಸಿದೆ. ಎರಡು ತಿಂಗಳ ಹಿಂದೆ ನಾನು ತೀವ್ರ ರೋಗಿಯಾಗಿದ್ದೆ. ಇದು ನನ್ನ ಕೊನೆಯ ಸಮಯವಾಗಿದೆ ಎಂದು ಮನೆಯವರು ಭಾವಿಸಿದರು. ಆ ಸಮಯದಲ್ಲಿ ನಾನು ಕನಸಿನಲ್ಲಿ ನಿಮ್ಮನ್ನು ಕಂಡೆನು. ನೀವು ನನ್ನ ತಲೆಯನ್ನು ಸವರುತ್ತಿದ್ದೀರಿ. ನನ್ನ ರೋಗವು ಸಂಪೂರ್ಣವಾಗಿ ದೇಹವನ್ನು ಬಿಟ್ಟು ಹೋಗಿದೆ ಎಂದು ನನಗೆ ಕನಸಿನಲ್ಲೇ ಅನುಭವವಾಗುತ್ತಿತ್ತು. ನಾನು ನಿದ್ದೆಯಿಂದ ಎದ್ದಾಗ ನಿಜವಾಗಿಯೂ ನನ್ನ ಕಾಯಿಲೆ ವಾಸಿಯಾಗಿತ್ತು. ನಾನು ಆರೋಗ್ಯವಂತನಾದೆ. ಹೇಗಿದ್ದರೂ ನಾನು ಅಲ್ಲಿಗೆ ಹೋದಾಗ, ಅವರು ಹೇಳಿದರು: ನಾನು ಕಂಡ ಕನಸನ್ನು ನಿಜರೂಪದಲ್ಲೂ ಈಡೇರಿಸಲು ನಾನು ಬಯಸುತ್ತೇನೆ. ಹೀಗೆ ಅವರು ನಾನು ಕೈಯಿಂದ ಸವರಿಲಿಕ್ಕಾಗಿ ತನ್ನ ತಲೆಯನ್ನು ಮುಂದೆ ಮಾಡಿದರು. ಬಹಳ ಸಂತೋಷದಲ್ಲಿದ್ದರು. ಖಿಲಾಫತಿನೊಂದಿಗೆ ಸಂಪೂರ್ಣವಾದ ನಿಷ್ಠೆಯ ಸಂಬಂಧವನ್ನು ಹೊಂದಿದ್ದರು. ದೀನಿನ ಸೇವೆ ಮಾಡಲು ನನಗೆ ಈ ಹೊಸ ಜೀವಿತ ಲಭಿಸಿದೆ. ಈಗ ಇದೇ ಸೇವೆಯಲ್ಲಿ ಜೀವಿತವನ್ನು ಸಾಗಿಸುವೆನು ಎಂದು ಜನರೊಡನೆ ಹೇಳುತ್ತಿದ್ದರು. ಈ ಪ್ರತಿಜ್ಞೆಯನ್ನು ಅವರು ಈಡೇರಿಸಿದರು. 94 ವರ್ಷಗಳು ಜೀವಿಸಿದರು. ಕೊನೆಯ ತನಕ ಕ್ರಿಯಾಶೀಲ ಮತ್ತು ಆರೋಗ್ಯವಂತರಾಗಿದ್ದರು. ವೃದ್ಧರಾಗಿದ್ದರೂ ಸಮೀಪದ ಜಮಾಅತುಗಳಿಗೆ ಹೋಗುತ್ತಿದ್ದರು. ಅವರ ಎರಡನೇ ಭೇಟಿ ಕೂಡ 2008ರಲ್ಲಿ ನನ್ನೊಂದಿಗೆ ನಡೆದಿತ್ತು. ನಾನು ಗಾನಾಗೆ ಹೋದಾಗ ಅವರು ಅಲ್ಲಿಗೆ ಬಂದಿದ್ದರು. ಗಾನದ ಜೂಬಿಲಿ ಜಲ್ಸದಲ್ಲಿ ಅವರು ಭಾಗಿಯಾದರು. ಬಹಳ ಸಂತೋಷದಲ್ಲಿದ್ದರು.

ಮುಬಲ್ಲಿಗ್ ಆದ ಶಾಹಿದ್ ಸಾಹಿಬ್‌ರು ಹೇಳುತ್ತಾರೆ: ಪಾಕಿಸ್ತಾನದ ಮುಬಲ್ಲಿಗ್‌ರೊಂದಿಗೆ ಬಹಳ ಪ್ರೀತಿಯ ಸಂಬಂಧವನ್ನು ಇರಿಸುತ್ತಿದ್ದರು. ಬಹಳ ವಿನಯದಿಂದ ಅವರನ್ನು ಭೇಟಿಯಾಗುತ್ತಿದ್ದರು. ಬಹಳ ಗೌರವದಿಂದ ವರ್ತಿಸುತ್ತಿದ್ದರು. ಧನತ್ಯಾಗಗಳಲ್ಲೂ ಸದಾ ಮುಂದಿರುತ್ತಿದ್ದರು. ನಿಯತವಾಗಿ ಚಂದಗಳನ್ನು ಪಾವತಿ ಮಾಡುತ್ತಿದ್ದರು. ಈ ವರ್ಷದ ಜನವರಿಯ ಕೊನೆಯಲ್ಲಿ ನಾನು ಅವರ ಗ್ರಾಮಕ್ಕೆ ಹೋದಾಗ, ನಾನು ಈ ವರ್ಷ ಹೋಗುವೆನು ಎಂದು ಅವರು ನನ್ನೊಡನೆ ಹೇಳಿದರು. ನೀವು ಯಾವುದಾದರೂ ಯಾತ್ರೆ ಮಾಡಲು ಹೋಗುತ್ತಿದ್ದೀರಾ ಎಂದು ನಾನು ಕೇಳಿದೆ. ಅವರು ಹೇಳಿದರು: ನಾನು ಅಲ್ಲಾಹನಿಗಾಗಿ ಜೀವಿತ ಪೂರ್ತಿ ಕೆಲಸ ಮಾಡಿದೆ. ಈಗ ಅದರ ಸಂಬಳವನ್ನು ಪಡೆಯಲು ಅಲ್ಲಾಹನ ಬಳಿಗೆ ಹೋಗುವೆನು. ನಿಧನಕ್ಕೆ ಒಂದು ವಾರಕ್ಕೆ ಮುಂಚೆ ಅವರು ತನ್ನ ಕುಟುಂಬದೊಡನೆ ಹೀಗೆ ಹೇಳಿದರು: ಈಗ ನನಗೆ ಅಲ್ಲಾಹನೊಡನೆ ಒಂದು ವಾರದ ಕಾಂಟ್ರೇಕ್ಟ್ ಇದೆ. ಒಂದು ವಾರ ಬಾಕಿಯಿದೆ. ಮುಂದಿನ ಜುಮಾದಂದು ಒಂದು ವಾರದ ನಂತರ, ಬೆಳಿಗ್ಗೆ ಸಾಮಾನ್ಯದಂತೆ ಅವರು ತಹಜ್ಜುದ್ ನಮಾಝಿಗಾಗಿ ಎದ್ದರು, ವುಝೂ ಮಾಡಿದರು ವುಝೂ ಮಾಡುತ್ತಿರುವಾಗಲೇ ಅಲ್ಲಿಂದಲೇ ತಲೆಸುತ್ತ ಉಂಟಾಗಿ ಮೃತಪಟ್ಟರು. ಈ ರೀತಿಯಲ್ಲಿ ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಸೇವೆ ಮಾಡುವ ದೂರ ಪ್ರದೇಶದ ವ್ಯಕ್ತಿಗಳನ್ನು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ದಯಪಾಲಿಸಿದ್ದಾನೆ. ಅವರು ಇಸ್ಲಾಮಿನ ಸಂದೇಶವನ್ನು ಲೋಕದಲ್ಲಿ ಹರಡುತ್ತಿದ್ದಾರೆ. ಅಲ್ಲಾಹನು ಇಂತಹ ನಿಸ್ವಾರ್ಥ ಮತ್ತು ಸೇವೆ ಮಾಡುವ ಜನರನ್ನು ಜಮಾಅತಿಗೆ ಸದಾ ದಯಪಾಲಿಸುತ್ತಿರಲಿ.

ದಿವಂಗತರು ಐವರು ಪುತ್ರರನ್ನು ಮತ್ತು 6 ಪುತ್ರಿಯರನ್ನು ಅಗಲಿರುವರು. ಅಲ್ಲಾಹನ ಅನುಗ್ರಹದಿಂದ ಎಲ್ಲರೂ ಅಹ್ಮದಿಯ್ಯತ್ತಿನಲ್ಲಿ ಇದ್ದಾರೆ. ಅಲ್ಲಾಹನು ಅವರಿಗೂ ಸ್ಥಿರಚಿತ್ತತೆ ನೀಡಲಿ. ತಂದೆಯ ಹೆಜ್ಜೆಗುರುತುಗಳ ಮೇಲೆ ನಡೆಯುವವರಾಗಲಿ.

ಜುಮಾ ನಮಾಝಿನ ನಂತರ ಎಲ್ಲ ದಿವಂಗತರ ಜನಾಝು ಗಾಇಬ್ ನಮಾಝ್ ನಿರ್ವಹಿಸುತ್ತೇನೆ.

************

*(ಪುಟ ಸಂಖ್ಯೆ 02ರ ಉಳಿದ ಭಾಗ)*

ತನ್ನ ಕಡೆಯಿಂದ ದಯಪಾಲಿಸಿರುವನು. ಅದರ ನ್ಯಾಯಪೂರ್ತಿಕರಣಕ್ಕಾಗಿ ಪ್ರಸ್ತುತಪಡಿಸುತ್ತಿದ್ದೇನೆ. ನನಗೆ ದೃಢವಾದ ನಂಬಿಕೆ ಇದೆ. ಪೀರ್ ಮೆಹರ್ ಅಲಿ ಶಾ ಸಾಹಿಬರ ಬಂಡವಾಳ ಅದರಿಂದ ಬಯಲಾಗುವುದು. ಏಕೆಂದರೆ ಲೋಕವೆಲ್ಲ ಅಂಧರಲ್ಲ ಅದರಲ್ಲಿಯೇ ನ್ಯಾಯಬಯಸುವವ ಜನರೂ ಇರುವರು. ಅದರ ಮಾರ್ಗವೆಂದರೆ ಇಂದು ಪೀರ್ ಮೆಹರ್ ಅಲಿ ಶಾ ಸಾಹಿಬರ ಪರವಾಗಿ ನಿರಂತರ ಜಾಹೀರಾತುಗಳು ಬರುತ್ತಿವೆ ನಾನು ಅದಕ್ಕೆ ಉತ್ತರ ನೀಡುತ್ತೇನೆ. ವಾಸ್ತವವಾಗಿಯೂ ಪೀರ್ ಮೆಹರ್ ಅಲಿ ಶಾ ಸಾಹಿಬ್ ಖುರ್‌ಆನ್‌ನ ಸಾಕ್ಷ್ಯಗಳು ಮತ್ತು ಅರಬ್ಬಿ ಭಾಷೆಯ ಸಾಹಿತ್ಯ, ವಾಕ್ಚಾತುರ್ಯದಲ್ಲಿ ತಜ್ಞರಾಗಿದ್ದಲ್ಲಿ ದಿಟವಾಗಿಯೂ ಆ ಸಾಮರ್ಥ್ಯಗಳು ಈಗಲೂ ಇರಬಹುದು. ಏಕೆಂದರೆ ಲಾಹೋರ್ ಬಂದು ಹೋಗಿಯೂ ಹೆಚ್ಚು ಸಮಯವೇನೂ ಆಗಲಿಲ್ಲ. ಆದುದರಿಂದ ನಾನು ಈ ಸಲಹೆಯನ್ನು ನೀಡುತ್ತೇನೆ. ನಾನು ಅದೇ ಸ್ಥಳದಲ್ಲಿ ಸ್ವಯಂ ಸೂರಃ ಫಾತಿಹದ ತಫ್ಸೀರ್ ಅರಬ್ಬಿ ಭಾಷೆಯಲ್ಲಿ ಬರೆದು ತೋರಿಸಿ ತನ್ನ ದಾವೆ ಸಾಬೀತುಪಡಿಸುವ ಬದಲು ಆ ಕುರಿತು ಸಾಕ್ಷ್ಯಗಳು ಸಹ ವಿವರಿಸುತ್ತೇನೆ. ಹಝ್ರತ್ ಪೀರ್ ಸಾಹಿಬ್ ನನ್ನ ವಿರುದ್ಧ ಆಕಾಶದಿಂದ ಬಂದಿಳಿದು ಮಸೀಹರು ಮತ್ತು ರಕ್ತಪಿಪಾಸಿ ಮಹದಿಯ ಸಾಕ್ಷ್ಯ ಸಾಬೀತುಪಡಿಸಬೇಕು. ಯಾವ ರೀತಿಯಲ್ಲಾದರೂ ಅರ್ಥಗಳನ್ನು ಕಲ್ಪಿಸಿ ನನ್ನ ವಿರುದ್ಧ ಅರಬ್ಬಿ ಭಾಷೆಯಲ್ಲಿ ಪುರಾವೆಗಳನ್ನು ಸಾಕ್ಷ್ಯಗಳನ್ನು ಬರೆದು ತೋರಿಸಲಿ.

ಪೀರ್ ಸಾಹಿಬರ ತಫ್ಸೀರ್ ಮೇಲುಗೈ ಸಾಧಿಸಿದರೆ 500 ರೂಪಾಯಿ ಅವರಿಗೆ ನೀಡಲು ದೃಢವಾದ ವಾಗ್ದಾನ

ಈ ಎರಡೂ ಗ್ರಂಥಗಳು ಡಿಸೆಂಬರ್ 1900 ರ 15 ತಾರೀಖಿನಿಂದ 70 ದಿನಗಳವರೆಗೆ ಮುದ್ರಣಗೊಂಡು ಹೊರಬರಬೇಕಾಗಿದೆ. ಆಗ ಜ್ಞಾನವುಳ್ಳವರು ಸ್ವಯಂ ಹೋಲಿಸಿ ನೋಡಿ ತೀರ್ಮಾನಿಸಿಕೊಳ್ಳುತ್ತಾರೆ

ಅರಬ್ಬಿ ಭಾಷಿಕರರಾಗಿರಬೇಕು ಅವರಿಗೆ ಉಭಯೇತ್ರರಿಂದಲೂ ಯಾವ ಸಂಭಂಧ ಇರಕೂಡದು. ಆಣೆ ಮಾಡಿ ಹೇಳಿದರೆ– ಪೀರ್ ಸಾಹಿಬರ ಗ್ರಂಥ ವಾಚ್ಚಾತುರ್ಯರ ನೆಲೆಯಲ್ಲಿ ಸಾಕ್ಷ್ಯಗಳ ನೆಲೆಯಲ್ಲಿ ಉತ್ತಮವಾಗಿದೆ ಎಂದಾದರೆ ನಾನು ಶರೀಅತ್ತಿನ ಪ್ರಕಾರ ಪ್ರತಿಜ್ಞೆ ಮಾಡುತ್ತೇನೆ. ತಡಮಾಡದೇ 500– ರೂಪಾಯಿ ನಗದು ಪೀರ್ ಸಾಹಿಬರಿಗೆ ಒಪ್ಪಿಸುವೆನು. ಆ ಪಕ್ಷದಲ್ಲಿ ಅವರ ಈ ದುಃಖವು ದೂರವಾಗುವುದು, ಪೀರ್ ಸಾಹಿಬರಿಗೆ ಸಂಬಂಧಿಸಿದವರು ದಿನನಿತ್ಯ ಅಳುತ್ತಿದ್ದಾರೆ. ವಿನಾಕಾರಣ ಪೀರ್ ಸಾಹಿಬರಿಗೆ ಲಾಹೋರ್‌ಗೆ ಬರುವ ಕಷ್ಟ ನೀಡಲಾಯಿತು ಎಂದು.

ಬುದ್ಧಿವಂತರು ಈ ಮಾತನ್ನು ಒಪ್ಪಿರುತ್ತಾರೆ. ಪೀರ್ ಸಾಹಿಬರಿಗೆ ಖುರ್‌ಆನ್‌ನ ಯಾವ ಜ್ಞಾನವು ಇಲ್ಲ.

ಈ ಸಲಹೆ ಪೀರ್ ಸಾಹಿಬರಿಗೂ ಅತ್ಯುತ್ತಮವಾಗಿದೆ. ಏಕೆಂದರೆ ಪೀರ್ ಸಾಹಿಬರಿಗೆ ಬಹುಶಃ ತಿಳಿದಿದೆಯೋ ಅಥವಾ ಇಲ್ಲವೋ ಬುದ್ಧಿವಂತರಾದ ಪೀರ್ ಸಾಹಿಬರಿಗೆ ಖುರ್‌ಆನ್‌ನ ಜ್ಞಾನವಿದೆ ಎಂದು ಅನಿಸುವುದಿಲ್ಲ ಅಥವ ಅವರು ಅರಬ್ಬಿಯಲ್ಲಿ ಒಂದು ಸಾಲು ಸಹ ಸಾಹಿತ್ಯಕವಾಗಿ ಬರೆಯಲು ಸಾಧ್ಯವಿಲ್ಲ. ಅಲ್ಲದೇ ಅವರ ಆಪ್ತ ಗೆಳೆಯರಿಂದ ಈ ವರದಿ ತಲುಪಿದೆ. ಅವರು ಹೇಳುತ್ತಾರೆ ಪೀರ್ ಸಾಹೇಬರಿಗೆ ಸ್ಪರ್ಧೆಯಲ್ಲಿ ಅರಬ್ಬಿ ತಫ್ಸೀರ್ ಬರೆಯುವ ಸಂದರ್ಭ ಬಂದಿದ್ದು ಒಳ್ಳೆಯದಾಯಿತು. ಇಲ್ಲವಾದರೆ ಅವರ ಎಲ್ಲಾ ಗೋಲ್ಡಾವಿಯರಿಗೆ ಅದರಿಂದ **"ಶಹತಿಲ್ ವುಜೂಹು"** ಮುಖಭಂಗವಾಗುತಿತ್ತು. ಹಾಗೆ ಅದರಲ್ಲಿ ಯಾವ ಸಂಶಯವು ಇಲ್ಲ. ಅವರ ಕೆಲ ಗೆಳೆಯರು ಅವರ ಈ ಭಾವನೆಗಳಿವೆ. ಪೀರ್ ಸಾಹಿಬರ ಅರಬ್ಬಿ ತಫ್ಸೀರ್ ಅವರ ಜ್ಞಾನ ನೋಡಿದರೆ ಅವರಲ್ಲಿರುವ ಆತಂಕ ಸಂಶಯ ಪೀರ್ ಸಾಹಿಬರ ಬಗ್ಗೆ ಇದ್ದದ್ದು ಬಯಲಾಗುವುದು. ಅದು ಜನರಿಗೆ ತಿಳಿದುಕೊಳ್ಳಲು ಮಾರ್ಗವಾಗುತ್ತದೆ. ಅದು ಈ ಕಾಲದ ಪೀರ್ ಸಾಹಿಬರುಗಳ ಅವಸ್ಥೆ ಆಗಿದೆ. ಪೀರ್ ಸಾಹಿಬ್ ಸೋತರೆ ಅವರಿಗೆ ಭರವಸೆ ಇರಲಿ. ನಾವು ಅವರಿಂದ ಏನನ್ನೂ ಬೇಡುವುದಿಲ್ಲ. ಮತ್ತು ಅವರಿಗೆ ಬೈಅತ್ ಮಾಡಲು ಸಹ ಹೇಳುವುದಿಲ್ಲ ನಾವು ಬಯಸುವುದಿಷ್ಟೇ ಪೀರ್ ಸಾಹಿಬರಲ್ಲಿ ಅಡಗಿದ ಖುರ್‌ಆನ್‌ನ ಜ್ಞಾನ ಸಾಕ್ಷ್ಯಗಳು ಅದರ ಮೇಲೆ ಭರವಸೆ ಇಟ್ಟುಕೊಂಡು ಅವರು ನನ್ನ ಗ್ರಂಥ ರದ್ದುಪಡಿಸಲು ಬರೆದಿರುವ ಗ್ರಂಥದ ವಾಸ್ತವ ಜನರಿಗೆ ತಿಳಿಯುವಂತಾಗಲಿ. ಆಗ ಬಹುಶಃ ಝುಲೇಖ ರೀತಿಯಲ್ಲಿ ಅವರ ಬಾಯಿಯಿಂದ – **"ಅಲ್‌ಆನ ಹಸ್‌ಅಸಲ್ ಹಖ್ಖು'** ಹೊರಡಬಹುದು. ಮತ್ತು ಅವರ ಮೂಢ ಗೆಳೆಯರು ಪತ್ರಕರ್ತರಿಗು ತಿಳಿಯುವಂತಾಗಲಿ. ಪೀರ್ ಸಾಹಿಬರ ಬಂಡವಾಳ ಏನೆಂಬುದು.

ಎಪ್ಪತ್ತು ದಿನಗಳಲ್ಲಿ ಸೂರಃ ಫಾತಿಹದ ತಫ್ಸೀರ್ ಮುದ್ರಣಗೊಂಡು ಪ್ರಕಟವಾಗಲಿ, ಯಾವ ಪಕ್ಷದವರು ಪ್ರಕಟಪಡಿಸುವುದಿಲ್ಲ ಮತ್ತು ಈ ಅವದಿ ಕಳೆದುಹೋದರೆ ಅವನು ಸುಳ್ಳುಗಾರನೆಂದು ಭಾವಿಸಲಾಗುವುದು.

ಆದರೆ ಪೀರ್ ಸಾಹಿಬ್ ದುಃಖಿಸುವುದು ಬೇಡ. ನಾವು ಅವರಿಗೆ ಅನುಮತಿ ನೀಡುತ್ತೇವೆ. ಅವರು ದಿಟವಾಗಿಯೂ ತನ್ನ ಸಹಾಯಕ್ಕಾಗಿ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಮೌಲ್ವಿ ಅಬ್ದುಲ್ ಜಬ್ಬಾರ್ ಗಝ್ನವಿ ಮತ್ತು ಮುಹಮ್ಮದ್ ಹುಸೇನ್ ಮುಂತಾದವರನ್ನು ಕರೆಯಿಸಿಕೊಳ್ಳಲಿ. ಅಲ್ಲದೇ ಅಮಿಷ ನೀಡಿ ಇಬ್ಬರು ಮೂವರು ಅರಬ್ಬಿಯರನ್ನು ಸಹ ಕರೆಯಿಸಿಕೊಳ್ಳಲಿ. ಉಭಯೇತ್ರರ ತಫ್ಸೀರ್ ನಾಲ್ಕು ಭಾಗಕ್ಕಿಂತ ಕಡಿಮೆ ಇರಬಾರದು. ನಿಗದಿತ ಅವಧಿ ತನಕ ಅಂದರೆ 15 ಡಿಸೆಂಬರ್ 1900 ರಿಂದ 25 ಫೆಬ್ರವರಿ 1901 ರವರೆ ಈಗ 70 ದಿನಗಳಾಗುತ್ತವೆ. ಉಭಯತ್ರರಲ್ಲಿ ಯಾವ ಪಕ್ಷದವರಾಗಲಿ ಸೂರಃ ಫಾತಿಹ ತಫ್ಸೀರ್ ಮುದ್ರಿಸಿ ಪ್ರಕಟಿಸದಿದ್ದರೆ ಮತ್ತು ಆ ಅವಧಿ ಕಳೆದರೆ ಅವನು ಸುಳ್ಳುಗಾರ ಎಂದು ಭಾವಿಸಲಾಗುವುದು. ಅವನ ಸುಲ್ಲುಗಾರಿಕೆಗೆ ಇನ್ಯಾವ ಸಾಕ್ಷ್ಯದ ಅಗತ್ಯವಿರುವುದಿಲ್ಲ.

**"ವಸ್ಸಲಾಮು ಅಲಾ ಮನಿತ್ತಬಲ್‌ಹುದಾ"**

ಜಾಹಿರಾತುದಾರರು: ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನ್, 15 ಡಿಸೆಂಬರ್ 1900. (ಮಜ್ಮೂಅ ಇಶ್ತ್‌ಹಾರಾತ್, ಸಂಪುಟ–3, ಪುಟ–147–151. ಇಶ್ತಿಹಾರ್ ಸಂಖ್ಯೆ–236, ಜುಲೈ 2019 ಖಾದಿಯಾನ್)

ಎಪ್ಪತ್ತು ದಿನಗಳ ಅವಧಿಯ ಒಳಗೆ ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) "ಇಜಾಝುಲ್ ಮಸೀಹ್" ಹೆಸರಿನ ಪಾಂಡಿತ್ಯ ಭರಿತ ಅರಬ್ಬಿಯಲ್ಲಿ ಸೂರಃ ಫಾತಿಹದ ತಫ್ಸೀರ್ (ವ್ಯಾಖ್ಯಾನ) ಪ್ರಕಟಿಸಿದರು. ಆದರೆ ಪೀರ್ ಮೆಹರ್ ಅಲಿ ಶಾ ಗೋಲ್ಡವಿಗೆ ಏನೂ ಪ್ರಕಟಿಸುವ ಭಾಗ್ಯ ದೊರೆಯಲಿಲ್ಲ. ಹಝ್‌ರತ್ ಮಸೀಹ್ ಮೌಊದ್(ಅ) ಒಂದೆಡೆ ಬರೆಯುತ್ತಾರೆ. ಅವರ ಹೆಸರು ಮೆಹರ್ ಅಲಿ ಅಲ್ಲ, ಬದಲು ಮೊಹರ್(ಮುದ್ರ) ಅಲಿ ಆಗಬೇಕಾಗಿತ್ತು. ಏಕೆಂದರೆ ಅವರು ಮೌನವಹಿಸಿಕೊಂಡೇ ತಮ್ಮ ವಿವಶತೆ ಹಾಗೂ ಅಲ್ಪ ಜ್ಞಾನದ ಮೇಲೆ ಮೊಹರ್ (ಮುದ್ರೆ) ಹಾಕಿಕೊಂಡರು. **(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಇನ್ನೊಬ್ಬ ಪ್ರವಾದಿಯ ಬೋಧನೆಗಳಿಗಿಂತ ಭಿನ್ನವಾಗಿರುತ್ತದೆ, ಆದರೂ ಪ್ರತಿಯೊಬ್ಬ ಪ್ರವಾದಿಯ ದೈವವಾಣಿಯು ಅದು ಬಹಿರಂಗಗೊಂಡ ಜನಾಂಗಕ್ಕೆ ಗುಣಪಡಿಸುವ ಮೂಲವಾಗಿರುತ್ತಿತ್ತು.

**ಫಸ್ಲುಕೀ ಸುಬುಲ ರಬ್ಬಿಕಿ ಝುಲುಲ** ನಿಂದ ಪ್ರತಿಯೊಬ್ಬ ಮನುಷ್ಯನಿಗೂ ದೈವವಾಣಿಯಾಗಬಹುದು ಎಂದು ಸೂಚಿಸಲಾಗಿದೆ, ಆದರೆ ಇದಕ್ಕೆ ಷರತ್ತೆಂದರೆ ಅವನು ಸರ್ವಶಕ್ತನಾದ ಅಲ್ಲಾಹನು ಸೂಚಿಸಿದ ಮಾರ್ಗವನ್ನು ಅನುಸರಿಸಬೇಕು ಮತ್ತು ಸ್ವಭಾವಕ್ಕೆ ಸಂಬಂಧಿಸಿದಂತೆ ಅದು ಹಾಳಾಗಲು ಬಿಡಬಾರದು. ಅವನು ತನ್ನ ಸ್ವಭಾವವನ್ನು ಶುದ್ಧವಾಗಿರಿಸಿಕೊಂಡಾಗ ಮತ್ತು ಪ್ರತಿಯೊಬ್ಬ ಮನುಷ್ಯನ ಮೇಲೆ ಮತ್ತು ಪ್ರತಿ ಜೀವಿಗಳ ಮೇಳೆ ಬಹಿರಂಗವಾದ ದೈವವಾಣಿಯನ್ನು ಅನುಸರಿಸಿದಾಗ, ಸರ್ವಶಕ್ತನಾದ ಅಲ್ಲಾಹನು ಅವನಿಗೆ ಜೇನುತುಪ್ಪದಂತಹ ದೈವವಾಣಿಯನ್ನು ಬಹಿರಂಗಪಡಿಸುತ್ತಾನೆ ಅಂದರೆ ಅದು ಬಹಳ ಶುದ್ಧವಾಗಿರುತ್ತದೆ ಮತ್ತು ಅದು ಮನುಕುಲಕ್ಕೆ ಗುಣಪಡಿಸುವ ಗುಣಗಳನ್ನು ಹೊಂದಿರುತ್ತದೆ, ಅಂದರೆ ಮಾನವನ ದೌರ್ಬಲ್ಯಗಳನ್ನು ದೂರಮಾಡಿ ಮನುಷ್ಯನನ್ನು ಪರಿಪೂರ್ಣನನ್ನಾಗಿ ಮಾಡುತ್ತದೆ.

**ಇನ್ನ ಫೀ ಝಾಲಿಕ ಲಆಯತಲ್ಲಿಖೌಮಿಂ ಯತಫಕ್ಕರೂನ್** ನಲ್ಲಿ ದೈವವಾಣಿ ಇಲ್ಲದೆ ಈ ಜಗತ್ತಿನಲ್ಲಿ ಯಾವುದೂ ಕೆಲಸ ಮಾಡುವುದಿಲ್ಲ ಎಂದು ಸೂಚಿಸಲಾಗಿದೆ. ಮಾರ್ಗದರ್ಶನ ಮಾಡುವ ಕೆಲಸವನ್ನು ತಾನೇ ಸ್ವತಃ ಮಾಡುತ್ತೇನೆ ಎಂದು ಹೇಳುವ ವ್ಯಕ್ತಿ ತಪ್ಪಾಗಿದ್ದಾನೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಿಷಯದ ಬಗ್ಗೆ ವಿಶೇಷ ಒತ್ತು ನೀಡಿದ್ದಾರೆ. ಅವರು ಹೇಳುತ್ತಾರೆ: ಮಾನವ ಪ್ರಯತ್ನವು ಪ್ರಾಪಂಚಿಕ ವ್ಯವಹಾರಗಳಲ್ಲಿ ಪ್ರಾರ್ಥನೆಯ ರೀತಿಯಲ್ಲಿದೆ ಮತ್ತು ಅದರ ಫಲಿತಾಂಶವಾಗಿ ಮನುಷ್ಯನ ಮನಸ್ಸಿನಲ್ಲಿ ಬರುವ ಉಪಾಯಗಳು ದೈವವಾಣಿಯ ಮೂಲಕ ಬರುತ್ತವೆ. ಹೀಗಾಗಿ ಜೇನುನೊಣದ ಉದಾಹರಣೆ ನೀಡಿ ಹೇಳಿರುವುದೇನೆಂದರೆ ಕಲಾಮೆ ಇಲಾಹಿ (ದೇವರ ವಾಕ್ಯ) ಇಲ್ಲದೆ ಯಶಸ್ವಿ ಜೀವನ ಅಸಾಧ್ಯವೆಂದು ಸೂಚಿಸುತ್ತದೆ. ಪ್ರಾಣಿಗಳಿಗೂ ಸಹ ದೈವವಾಣಿಯ ಅವಶ್ಯಕತೆಯಿದೆ ಮತ್ತು ಅವುಗಳಿಗೆ ಒಂದು ರೀತಿಯ ದೈವವಾಣಿಯನ್ನು ಬಹಿರಂಗಪಡಿಸಲಾಗುತ್ತದೆ, ಅದರ ಪ್ರಮುಖ ಉದಾಹರಣೆಯು ಜೇನುನೊಣದಲ್ಲಿ ಕಂಡುಬರುತ್ತದೆ. ಆದ್ದರಿಂದ ಪ್ರತಿಯೊಂದು ವರ್ಗದ ಜೀವಿಗಳಿಗೆ ಅವರ ಜೀವನವು ಸೀಮಿತವಾಗಿದ್ದರೂ ಮತ್ತು ಅವರ ಬುದ್ಧಿಶಕ್ತಿಯು ಚಿಕ್ಕದಾಗಿದ್ದರೂ ಸಹ ದೇವರು ದೈವವಾಣಿಯನ್ನು ಬಹಿರಂಗಪಡಿಸಿದ್ದಾನೆ. ಹೀಗೆ ಮುಂದಿನ ಪ್ರಪಂಚದ ಮೇಲೆ ಪರಿಣಾಮ ಬೀರುವ ವ್ಯಕ್ತಿಯು ವ್ಯವಸ್ಥೆಯು ದೈವವಾಣಿ ಇಲ್ಲದೆ ಹೇಗೆ ಕಾರ್ಯನಿರ್ವಹಿಸುತ್ತದೆ?

ಪವಿತ್ರ ಖುರ್‌ಆನ್‌ನ ಅನೇಕ ಸ್ಥಳಗಳಲ್ಲಿ, ಜೇನುತುಪ್ಪದ ಬಗ್ಗೆ ಬಂದಿರುವ ಪದಗಳ ಉಲ್ಲೇಖಿಸಲಾಗಿದೆ ಮತ್ತು ಅದರಿಂದ ತಿಳಿಸಿರುವುದೇನೆಂದರೆ ದೈವವಾಣಿಯ ಫಲಿತಾಂಶವಾಗಿ ಉತ್ಪತ್ತಿಯಾಗಿರುವ ಪಡಗಳ ಕಲಾಮ್‌ನ ಪರಿಣಾವವಾಗಿ ವ್ಯಕ್ತವಾಗುತ್ತದೆ ಅಂದರೆ ಗುಣಪಡಿಸುವ ಶಕ್ತಿ. ಹೀಗಾಗಿ ಸೂರಃ ಬನೀ ಇಸ್ರಾಈಲ್‌ನಲ್ಲಿ **ವನುನಝ್ಝಿಲು ಮಿನಲ್ ಖುರ್‌ಆನಿ ಮಾ ಹುವ ಶೀಫಾಉವ್ವರಹ್ಮತು ಲ್ಲಿಲ್‌ಮುಮಿನೀನ್** ಎಂದು ಹೇಳಿರುವನು. ಸೂರಃ ಯೂನುಸ್‌ನ ರುಕು 6ರಲ್ಲಿ **ಯಾ ಅಯ್ಯುಹನ್ನಾಸು ಖದ್ ಜಾಅಕುವ್ ವೌಇಝತುಮ್ಮಿರ್ರಬ್ಬಿಕುವ್ ವಶೀಫಾಉಲ್ಲಿಮಾ ಫಿಸ್ಸುದೂರಿ** ಎಂದು ಹೇಳಿದ್ದಾನೆ ಅದೇ ರೀತಿ ಹಾಮ್‌ಮೀಮ್ ಸಜದಃ ರಕು–5 ರಲ್ಲಿ **ಖುಲ್ ಹುವಲ್ಲಝೀನ ಆಮನೂ ಹುದವ್ವಶಿಫಾಅ** ಎಂದು ಹೇಳಿರುವನು.

**(ತಫ್ಸಿರ್ ಕಬೀರ್, ಸಂಪುಟ–4, ಪುಟ–195 ಖಾದಿಯಾನ್ 2010)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಪೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲೆಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**ಕನಿಷ್ಠ ಐದು ದೈನಂದಿನ ನಮಾಝ್‌ಗಳನ್ನು ಸಲ್ಲಿಸಬೇಕು ಮತ್ತು ಅವಕಾಶವಿರುವವರು ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕು**

**ಪವಿತ್ರ ಖುರ್‌ಆನ್ ಓದುವ ಮತ್ತು ಪಠಿಸುವ ಅಭ್ಯಾಸವನ್ನು ಪಡೆಯಿರಿ, ನೀವು ನಮಾಝ್ ಮತ್ತು ಖುರ್‌ಆನ್‌ಗೆ ಗಮನ ಕೊಡುತ್ತಿದ್ದೀರಾ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಿಕೊಳ್ಳಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉಲ್ಲೇಖಗಳು ಇತ್ಯಾದಿಗಳನ್ನು ಒಳಗೊಂಡ ದರ್ಸ್‌ಗಳನ್ನು ಆಯೋಜಿಸಿ. ದೇಶಾದ್ಯಂತ ದೊಡ್ಡ ಪ್ರಮಾಣದಲ್ಲಿ ಮರಗಳನ್ನು ನೆಡುವ ಅಭಿಯಾನವನ್ನು ಪ್ರಾರಂಭಿಸಿ.**

**ಸೈಕಲ್ ಓಡಿಸುವ ಮೂಲಕ ತಮ್ಮ ಆವರಣವನ್ನು ಶುದ್ಧಗೊಳಿಸಿರಿ.**

**ದೀನ್ ಅನ್ನು ಆದ್ಯತೆ ನೀಡುವ ಸಂಬಂಧಗಳು ಉತ್ತೀರ್ಣವಾಗುವುದು, ಯಾರು ಲೌಕಿಕತೆಯನ್ನು ಮುಂದೆ ಇಡುತ್ತಾರೋ ಅವರ ಸಂಬಂಧಗಳಲ್ಲಿ ಅಡಚಣಗಳು ಉಂಟಾಗುವುದು.**

**ಅಲ್ಲಾಹನ ಸಂದೇಶವನ್ನು ತಲುಪಿಸಿರಿ ಮತ್ತು ಅಲ್ಲಾಹನ ಹಕ್ಕುಗಳನ್ನು ಪಾವತಿಸಲು ಮತ್ತು ದಾಸರ ಹಕ್ಕುಗಳನ್ನು ಈಡೇರಿಸಲು ಕಲಿಸಿ.**

## ರಾಷ್ಟ್ರೀಯ ಮಜ್ಲಿಸ್ ಆಮಿಲಾ ಮಜ್ಲಿಸ್ ಅನ್ಸಾರುಲ್ಲಾ ಆಸ್ಟ್ರೇಲಿಯಾದ ಸದಸ್ಯರಿಗೆ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಸಲಹೆ ಮತ್ತು ಮಾರ್ಗದರ್ಶನ.

ಮಾರ್ಚ್ 6, 2021 ರಂದು, ನ್ಯಾಷನಲ್ ಅಮೀಲಾ ಮಜ್ಲಿಸ್ ಅನ್ಸಾರುಲ್ಲಾ ಆಸ್ಟ್ರೇಲಿಯಾ ಮತ್ತು ಪ್ರಾದೇಶಿಕ ಖಾಯೆದ್‌ರು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರೊಂದಿಗೆ ಆನ್‌ಲೈನ್‌ನಲ್ಲಿ ಭೇಟಿಯಾಗುವ ಅನುಗ್ರಹವನ್ನು ಹೊಂದಿದ್ದರು. ಹುಝೂಖು ಅನ್ವರ್(ಅತಬಿಅ)ರವರು ಈ ಭೇಟಿಯನ್ನು ತಮ್ಮ ಕೇಂದ್ರ ಕಚ್ಚೇರಿಯಾದಂತಃ ಇಸ್ಲಾಮಬಾದ್(ಟಿಲ್‌ಫೋರ್ಡ್)ನಲ್ಲಿ ಆಸೀಸರಾಗಿದ್ದರು ಮತ್ತು ಮಜ್ಲಿಸ್ ಅಮೀಲಾದ ಸದಸ್ಯರು ಸಿಡ್ನಿಯ ಖಿಲಾಫತ್ ಹಾಲ್, ಮಸ್ಜಿದ್ ಬೈತ್ ಅಲ್ ಹುದಾದಿಂದ ಭಾಗವಹಿಸಿದ್ದರು. 65 ನಿಮಿಷಗಳ ಅವಧಿಯ ಈ ಸಭೆಯಲ್ಲಿ, ಆಮಿಲದ ಎಲ್ಲಾ ಸದಸ್ಯರು ತಮ್ಮ ತಮ್ಮ ಇಲಾಖೆಗಳನ್ನು ಉಲ್ಲೇಖಿಸಿ ತಮ್ಮ ಪ್ರಯತ್ನಗಳ ವರದಿಯನ್ನು ಮಂಡಿಸಿದ ನಂತರ ಹುಝೂರ್ ಅನ್ವರ್(ಅತಬಿಅ) ಅವರನ್ನು ಮಾರ್ಗದರ್ಶನ ಮತ್ತು ಸೂಚನೆಗಳನ್ನು ಕೇಳಿದೆ.

ಸಭೆಯ ಆರಂಭದಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಕೋವಿಡ್‌ನ ಪರಿಸ್ಥಿತಿ ಮತ್ತು ಹಾಜರಿದ್ದವರು ಏಕೆ ಮಾಸ್ಕ್‌ಗಳನ್ನು ಧರಿಸಿಲ್ಲ ಎಂದು ವಿಚಾರಿಸಿದರು. ಈ ಕುರಿತು ಸ್ನೇಹಿತರೊಬ್ಬರು ಹೇಳಿದರು ಹುಝೂರ್ ಆಸ್ಟ್ರೇಲಿಯಾದಲ್ಲಿ, ಕೋವಿಡ್ ಹೆಚ್ಚಿನ ಪ್ರಮಾಣದಲ್ಲಿ ನಿಯಂತ್ರಣಕ್ಕೆ ಬಂದಿದೆ ಮತ್ತು ಅನೇಕ ಸಡಿಲಿಕೆಗಳಿವೆ. ಮತ್ತು ಮುಂದಿನ ಎರಡು ದಿನಗಳಲ್ಲಿ ಹೆಚ್ಚಿನ ನಿರ್ಬಂಧಗಳನ್ನು ತೆಗೆದುಹಾಕಲು ಯೋಚಿಸುತ್ತಿದ್ದಾರೆ. ಆದ್ದರಿಂದಲೇ ಮಾಸ್ಕ್ ಧರಿಸಿರಲಿಲ್ಲ. ತದನಂತರ ಹುಝೂರ್ ಅನ್ವರ್(ಅತಬಿಅ) ದುಆ ನಿರ್ವಹಿಸಿದರು.

ಸಭೆಯಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಮಜ್ಲಿಸ್ ಅನ್ಸಾರ್‌ಉಲ್ಲಾಹನ ಸದಸ್ಯರನ್ನು ಐದು ಸೈನಂದಿನ ನಮಾಝ್‌ಗಳನ್ನು ನಿರ್ವಹಿಸುವಂತೆ ಒತ್ತಾಯಿಸಿದರು. ಅನ್ಸಾರ್‌ಗಳು ತಮ್ಮ ಪರಲೋಕದ ಬಗ್ಗೆ ಕಾಳಜಿ ವಹಿಸಬೇಕು ಮತ್ತು ಇಲ್ಲಿ ನಮಾಝ್ ನಿರ್ವಹಿಸುವವರ ಸಂಖ್ಯೆ 100% ಇರಬೇಕು ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು. ಅನ್ಸಾರ್‌ಗಳು ಏನು ಹೇಳುತ್ತಾರೆ, ಅನ್ಸಾರ್‌ಗಳು ವಯಸ್ಸಾಗುತ್ತಿದ್ದಾರೆ ಆದ್ದರಿಂದ ಅವರು ಹೆಚ್ಚು ಕಾಳಜಿ ವಹಿಸಬೇಕು. ಕವಿಯೊಬ್ಬ ಹೇಳಿದ:

"ವಖ್ತ್‌ಕಾ ಪಂಛಿ ಉಡ್ತಾ ಜಾಯೆ, ಉಮರ್ ಕಾ ಸಾಯ ಘಟ್ತಾ ಜಾಯೆ"

(ಅಂದರೆ: ಸಮಯದ ಪಕ್ಷಿಯು ಹಾರುತ್ತದೆ, ಬಾಳಿನ ನೆರಳು ಕಡಿಮೆಯಾಗುತ್ತಿದೆ)

ಆದ್ದರಿಂದ, ನೀವು ಅದರ ಬಗ್ಗೆ ಯೋಚಿಸಿದರೆ, ನೀವು ಚಿಂತಿಸಬೇಕಾಗಿದೆ. ಆದ್ದರಿಂದ, ನಿಮ್ಮ ಅನ್ಸಾರ್‌ಗಳಿಗೆ ದಿನಕ್ಕೆ ಕನಿಷ್ಠ ಐದು ಬಾರಿ ನಮಾಝನ್ನು ನಿರ್ವಹಿಸಲು ಹೇಳಿ ಮತ್ತು ಅವಕಾಶವಿರುವವರು ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕು. ಅವರ ನಮಾಝ್ ಸೆಂಟರ್ ಅಥವಾ ಮಸೀದಿ ದೂರದಲ್ಲಿದ್ದರೆ, ಅವರ ಮನೆಗಳಲ್ಲಿ ಬಾಜಮಾಅತ್ ಪ್ರಾರ್ಥನೆಯನ್ನು ಏರ್ಪಡಿಸಿ. ಕನಿಷ್ಠ ಅವರ ಹೆಂಡತಿ ಮತ್ತು ಮಕ್ಕಳು ಪ್ರಾರ್ಥಿಸಿದರೆ ಹೊಸ ಪೀಳಿಗೆಯು ಐದು ಬಾರಿ ಮತ್ತು ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸಲು ಮುಂದಾಗುತ್ತಾರೆ ಮತ್ತು ನಮಾಝಿನ ಮಹತ್ವವು ಅವರಲ್ಲಿ ಬೆಳೆಯುತ್ತದೆ. ಅದರ ಬಗ್ಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿ. ಅಂತೆಯೇ, ಪವಿತ್ರ ಖುರ್‌ಆನ್ ಓದುವ ಮತ್ತು ಪಠಿಸುವ ಅಭ್ಯಾಸವನ್ನು ಮಾಡಿ ಮತ್ತು ತಮ್ಮ ಮನೆಗಳಲ್ಲಿ ತಮ್ಮ ಮಕ್ಕಳು ನಮಾಝ್ ಮತ್ತು ಖುರ್‌ಆನ್‌ನ ಬಗ್ಗೆ ಗಮನ ಹರಿಸುತ್ತಿದ್ದಾರೆಯೇ ಎಂದು ಪರಿಶೀಲಿಸುವುದನ್ನು ಅನ್ಸಾರ್‌ಗಳ ಕರ್ತವ್ಯವಾಗಿ ಮಾಡಿ. ಇದು ಅನ್ಸಾರರ ಜವಾಬ್ದಾರಿಯೂ ಆಗಿದೆ. ಅದೇ ರೀತಿಯಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕೆಲವು ಉಲ್ಲೇಖಗಳನ್ನು ಹೊಂದಿರುವ ಬೋಧನೆ ಇತ್ಯಾದಿಗಳನ್ನು ಮನೆಗಳಲ್ಲಿ ಮಾಡಿದರೆ, ಅದು ತರಬೇತಿಯ ಅಂಶವಾಗುತ್ತದೆ. ನಾವು ದೂರ ಸರಿಯುತ್ತಿದ್ದಂತೆ, ಸಮಯವು ದೂರ ಸರಿಯುತ್ತಿದೆ ಮತ್ತು ಹೊಸ ಪೀಳಿಗೆಯ ಬಗ್ಗೆ ಕಾಳಜಿ ವಹಿಸಲು ತಮ್ಮ ಮಕ್ಕಳನ್ನು ತರಬೇತುಗೊಳಿಸುವ ಜವಾಬ್ದಾರಿಗಳು ಅನ್ಸಾರ್‌ಗಳಿಗೆ ಹೆಚ್ಚುತ್ತಿವೆ. ಅನ್ಸಾರುಲ್ಲಾಹ್ ಈಗ ಹೊಸ ಪೀಳಿಗೆಯ ಬಗ್ಗೆ ಕಾಳಜಿ ವಹಿಸದಿದ್ದರೆ, ಕೆಲವು ವರ್ಷಗಳ ನಂತರ ದೊಡ್ಡ ಸಮಸ್ಯೆ ಉಂಟಾಗುತ್ತದೆ. ನೀವು ಈ ದೇಶಗಳಲ್ಲಿ ಉಳಿದುಕೊಂಡರೆ, ಎಲ್ಲರೂ ಸಂಪೂರ್ಣವಾಗಿ ಲೌಕಿಕರಾಗುತ್ತಾರೆ.

ಸಭೆಯಲ್ಲಿ, ಹುಝೂರ್ ಅನ್ವರ್(ಅತಬಿಅ) ರವರು ಮತ್ತೊಮ್ಮೆ ಪವಿತ್ರ ಖುರ್‌ಆನ್‌ನ ಪಠಣಕ್ಕೆ ಒತ್ತು ನೀಡಿದರು ಮತ್ತು ಅವರ 100% ಅನುಯಾಯಿಗಳಿಗೆ ಪವಿತ್ರ ಖುರ್‌ಆನ್ ಅನ್ನು ಹೇಗೆ ಓದುವುದು ಎಂದು ತಿಳಿದಿದೆಯೇ ಎಂದು ವಿಚಾರಿಸಿದರು. ಅದರ ಮೇಲೆ ಹುಝೂರ್ ಅನ್ವರ್(ಅತಬಿಅ) ಅವರು ಅವರಿಗೆ ಮೂರು ಪರ್ಸೆಂಟ್ ಗೊತ್ತಿಲ್ಲ ಎಂದು ಹೇಳಿದ್ದಾರೆ.

ಹುಝೂರ್ ಅನ್ವರ್(ಅತಬಿಅ) ಹೇಳಿದರು:

ಅವರಿಗೆ ವ್ಯವಸ್ಥೆ ಮಾಡಿರಿ, ಪರವಾಗಿಲ್ಲ. ಅನೇಕ ಹಳೆಯ ಅನ್ಸಾರ್‌ಗಳು ಸಹ ಉತ್ಸಾಹದಿಂದ ಓದುತ್ತಾರೆ. ನಿನ್ನೆಯಷ್ಟೇ ನಾನು ಪ್ರಸ್ತಾಪಿಸಿದ್ದೇನೆ, ನಿಧನ ಹೊಂದಿದ ಓರ್ವ ಘಾನದ ಹಾಫಿಝ್ ಸಾಹಿಬ್, ಬೋಟೆಂಗ್ ಸಾಹಿಬ್, 48 ನೇ ವಯಸ್ಸಿನಲ್ಲಿ, ಅವರು ತಮ್ಮ ಉಚ್ಚಾರಣೆಯನ್ನು ಸುಧಾರಿಸಲು ಖೈದಾ ಮತ್ತು ಪವಿತ್ರ ಖುರ್‌ಆನ್ ಅನ್ನು ಪುನಃ ಕಲಿಯುತ್ತಿದ್ದರು. ಹಾಗಾಗಿ ಅದರಲ್ಲಿ ನಾಚಿಕೆ ಇಲ್ಲ ಇದು ಅಲ್ಲಾಹನ ಮಾತುಗಳಾಗಿವೆ, ಕಲಿಯುವುದರಲ್ಲಿ ತಪ್ಪೇನು. ಪ್ರಯತ್ನವನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ಯಶಸ್ಸು ಕೂಡ ಸಿಗುತ್ತದೆ. 'ಪ್ರಯತ್ನಿಸುತ್ತೇನ' ಎಂದಷ್ಟೇ ಹೇಳಬೇಡಿ.

ಹುಝೂರ್ ಅನ್ವರ್(ಅತಬಿಅ) ಅವರು ವಖಾರೆ ಅಮಲ್‌ನ ಕಾರ್ಯದರ್ಶಿ ಅವರಿಗೆ ಸೂಚನೆ ನೀಡಿ, ದೇಶಾದ್ಯಂತ ಗಿಡಗಳನ್ನು ನೆಡುವ ಅಭಿಯಾನವನ್ನು ದೊಡ್ಡ ಮಟ್ಟದಲ್ಲಿ ಆರಂಭಿಸಬೇಕು ಎಂದರು. ಹುಝೂರ್ ಅನ್ವರ್(ಅತಬಿಅ) ಹೇಳಿದರು: ಇತ್ತೀಚಿನ ದಿನಗಳಲ್ಲಿ ಕಾಡ್ಗಿಚ್ಚು ಅನೇಕ ಕಾಡಾನೆಗಳನ್ನು ನಾಶಪಡಿಸಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮರಗಳನ್ನು ನೆಡುವ ಮಹತ್ವವನ್ನು ಹೆಚ್ಚಿಸಿದೆ.

ನಂತರ ಹುಝೂರ್ ಅನ್ವರ್(ಅತಬಿಅ) ಅವರು ಎರಡನೇ ಸಾಲಿನ ಅನ್ಸಾರ್‌ಉಲ್ಲಾಹ್ ಅವರ ವ್ಯಾಯಾಮದ ವರದಿಯನ್ನು ವಿಚಾರಿಸಿದರು, ಎಷ್ಟು ಅನ್ಸಾರ್‌ಗಳು ಸೈಕಲ್ ಬಳಸುತ್ತಾರೆ. ಇದರ ಮೇಲೆ, ಹುಝೂರ್ ಅನ್ವರ್(ಅತಬಿಅ) 97 ಅನ್ಸಾರ್ ಸೈಕಲ್‌ಗಳನ್ನು ಹೊಂದಿದ್ದು, ಅದರಲ್ಲಿ 32 ಅನ್ಸಾರ್ ಎರಡನೇ ಸಾಲು ಮತ್ತು 65 ಮೊದಲ ಸಾಲಿನ ಅನ್ಸಾರ್ ಎಂದು ಸ್ನೇಹಿತರೊಬ್ಬರು ಹೇಳಿದರು. ಮತ್ತು ಅವರು ನಿಯಮಿತವಾಗಿ ಸೈಕಲ್ ಉಪಯೋಗಿಸುತ್ತಾರೆ, ಕೇವಲ ಇರಿಸಿಕೊಳ್ಳಲು ಅಲ್ಲ. ಇನ್ನುಳಿದ ಅನ್ಸಾರ್‌ಗಳೂ ಸೈಕ್ಲಿಂಗ್ ಕಡೆ ಗಮನ ಹರಿಸಬೇಕು ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು. ಕಡಿಮೆ ದೂರದವರೆಗೆ ಸೈಕಲ್ ಓಡಿಸಿರಿ. ಹೀಗಾಗಿ, ಬೈಸಿಕಲ್ ಬಳಸುವ ಮೂಲಕ, ನಿಮ್ಮ ಪರಿಸರವನ್ನು ಸ್ವಚ್ಛಗೊಳಿಸುವಲ್ಲಿ ಪಾತ್ರವಹಿಸಿರಿ.

ವಿಚ್ಛೇದನದ ಪ್ರಮಾಣ ಹೆಚ್ಚುತ್ತಿದೆ ಎಂದು ಕುಟುಂಬದ ಸಮಸ್ಯೆಗಳ ಬಗ್ಗೆ ಸ್ನೇಹಿತರೊಬ್ಬರು ವಿಚಾರಿಸಿದರು. ಈ ನಿಟ್ಟಿನಲ್ಲಿ ಅನ್ಸಾರುಲ್ಲಾಹ್ ಯಾವ ಪಾತ್ರವನ್ನು ವಹಿಸಬೇಕು?

ಈ ಕುರಿತು ಹುಝೂರ್ ಅನ್ವರ್(ಅತಬಿಅ) ಹೇಳಿದರು: ವಾಸ್ತವವೇನೆಂದರೆ ಲೌಕಿಕತೆ ಹೆಚ್ಚಿದೆ, ತಾಳ್ಮೆ, ಧೈರ್ಯ ಕಡಿಮೆಯಾಗಿದೆ, ಎರಡೂ ಕಡೆ ತಪ್ಪುಗಳು ನಡೆಯುತ್ತಿವೆ. ಒಂದು ಹುಡುಗಿ, ಒಂದು ಹುಡುಗ ಕೂಡ. ಪ್ರಪಂಚದ ಮೇಲೆ ಧರ್ಮಕ್ಕೆ ಪ್ರಥಮ ಸ್ಥಾನ ನೀಡುವುದಾಗಿ ಅವರು ಪ್ರತಿಜ್ಞೆ ಮಾಡುತ್ತಾರೆ, ಆದರೆ ಪೈಗಂಬರ್(ಸ) ಅವರು ನೀವು ಸಂಬಂಧಗಳನ್ನು ಹೊಂದಿರುವಾಗ, ನಾವು ಇತರ ಲೌಕಿಕ ವಿಷಯಗಳಾದ ಜಗತ್ತು ಅಥವಾ ಸೌಂದರ್ಯಕ್ಕಿಂತ ಧರ್ಮಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದ ಮಾತು ಅವರಿಗೆ ನೆನಪಿರುವುದಿಲ್ಲ. ಆದ್ದರಿಂದ ನೀವು ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡರೆ, ನಿಮಗೆ ಸಮಸ್ಯೆಗಳು ಕಡಿಮೆಯಾಗುತ್ತವೆ. ಈ ಭೌತಿಕತೆ ನಮ್ಮ ಅಹ್ಮದಿ ಸಮಾಜದ ಮೇಲೂ ಪರಿಣಾಮ ಬೀರುತ್ತಿದೆ. ಆದ್ದರಿಂದ ಸುಧಾರಣಾ ಸಮಿತಿ (ಇಸ್ಲಾಹಿ ಕಮೀಟಿ) ಮತ್ತು ತರಬೇತಿ ಕಾರ್ಯದರ್ಶಿಯನ್ನು ಜಮಾಅತ್ತಿನ ಮಟ್ಟದಲ್ಲಿ, ಲಜ್ನದ ತರಬೇತಿ ಸೆಕ್ರೇಟರಿ, ಖುದ್ದಾಮುಲ್ ಅಹ್ಮದೀಯದ ಮುಹ್ತಮಿಮ್ ತರಬಿಯ್ಯತ್ ಅದೇ ರೀತಿ ಖಾಎದ್ ತರ್‌ಬೀಯ್ಯತ್ ಅನ್ಸಾರುಲ್ಲಾ ಇವರೆಲ್ಲರು ಸೇರಿ ತಮ್ಮ ತಮ್ಮ ಪರಿಸರದಲ್ಲಿ ತರಬೇತಿ ನೀಡುವತ್ತ ಗಮನ ಹರಿಸಬೇಕು. ನಾವು ಲಭಕಿಕತೆಯ ಮೇಲೆ ಧರ್ಮವನ್ನು ಇಡುತ್ತೇವೆ ಎಂದು ನಾವು ವಾಗ್ದಾನ ಮಾಡುತ್ತೇವೆ, ಆದರೆ ನಾವು ಈ ವಾಗ್ದಾನವನ್ನು ಅನುಸರಿಸುವುದಿಲ್ಲ ಆದರೂ ನಾವು ಅದನ್ನು ಉಲ್ಲಂಘಿಸುತ್ತಿದ್ದೇವೆ. ಹೀಗೆ ನಂತರ ಈ ಲೌಕಿಕ ಆಸೆಗಳು ಸಹ ಹೆಚ್ಚಾಗುತ್ತವೆ, ಹುಡುಗಿಯರಲ್ಲಿ ತಾಳ್ಮೆ ಮತ್ತು ಧೈರ್ಯವೂ ಕಡಿಮೆಯಾಗಿದೆ ಮತ್ತು ಹುಡುಗರಲ್ಲಿಯೂ ಸಹ. ನಾನು ಇದನ್ನೂ ನೋಡಿದ್ದೇನೆ. ಆದ್ದರಿಂದ, ಇಸ್ಲಾಂ ಧರ್ಮಕ್ಕೆ ನೀಡಿದ ಆರೋಪದಲ್ಲಿ ಮದುವೆಯನ್ನು ಏರ್ಪಡಿಸುವುದರಿಂದ Arrange marriage ನಲ್ಲಿ ನಮ್ಮ ಸಂಬಂಧಗಳು ಸರಿಯಾಗಿ ಹೊಂದಿಕೆಯಾಗಲಿಲ್ಲ ಎಂದು, ಆದ್ದರಿಂದ ನಮ್ಮ ಸಂಬಂಧಗಳು ಮುರಿದುಹೋಗಿವೆ, ಇದು ಕೂಡ ತಪ್ಪು ಯೋಚನೆಯಾಗಿದೆ. ಅದೇ ಪ್ರವೃತ್ತಿಯು ಇಡೀ ಪ್ರಪಂಚದಲ್ಲಿ ಹೊರಹೊಮ್ಮುತ್ತಿದೆ ಮತ್ತು ಲೌಕಿಕತೆಯ (ಪ್ರವೃತ್ತಿ) ನಮ್ಮ ಸಮಾಜದಲ್ಲಿ (ಸಹ) ಬರುತ್ತಿದೆ, ಆದ್ದರಿಂದ ನಾವು ಕೂಡ ಆಕಾರಗಳು ಎದುರಿಸುತ್ತಿವೆ.

ಒಂದು ವಿಷಯವೇನೆಂದರೆ ಸಂಬಂಧಗಳು ಮುರಿದು ಬೀಳುವುದು ಮತ್ತು ಎರಡನೇಯದು ಹೆಣ್ಣುಮಕ್ಕಳಿಗೆ ಒಳ್ಳೆಯ ಸಂಬಂಧಗಳು ಸಿಗುವುದಿಲ್ಲ, ಕೌಟುಂಬಿಕ ಸಮಸ್ಯೆಗಳಿರುತ್ತವೆ. ನೀವು ಹುಡುಗರನ್ನು ಸರಿಯಾಗಿ ತರಬೇತುಗೊಳಿಸಿದರೆ, ಅನ್ಸಾರ್‌ಗಳು ಸಹ ತಮ್ಮ ಮಕ್ಕಳನ್ನು ಸರಿಯಾಗಿ ತರಬೇತಿ ನೀಡಿದರೆ, ಖುದ್ದಾಮರು ತಮ್ಮ ಸಹೋದರರನ್ನು ಸರಿಯಾಗಿ ತರಬೇತಿ ನೀಡಿದರೆ ಮತ್ತು ಪ್ರವಾದಿ(ಸ) ಹೇಳಿರುವುದನ್ನು ತಿಳಿಸಿದರೆ; ಪ್ರವಾದಿ(ಸ) ಹೇಳಿದರು: “ಧರ್ಮವನ್ನು ಪ್ರಪಂಚದ ಮೇಲೆ ಆದ್ಯತೆ ನೀಡಿ ಮತ್ತು (ಧರ್ಮ)ವನ್ನು ನೋಡಿರಿ ಮತ್ತು ಲಜ್ನ ಸರಿಯಾದ ರೀತಿಯಲ್ಲಿ ತರಬೇತಿ ನೀಡಿದರೆ ಮತ್ತು ಹುಡುಗಿ ಧರ್ಮದ ನಿಷ್ಠೆಯಾಗಿದ್ದರೆ, ಧರ್ಮಕ್ಕೆ ಆದ್ಯತೆ ನೀಡುವ ಸಂಬಂಧಗಳು ಸಹ ಯಶಸ್ವಿಯಾಗುತ್ತವೆ. ಲೌಕಿಕತೆಯನ್ನು ಮುಂದೆ ಇಟ್ಟುಕೊಳ್ಳುವವರು ಅವರಲ್ಲಿಯೂ ಬಿರುಕುಗಳು ಕಾಣಿಸಿಕೊಳ್ಳುತ್ತವೆ. ಇದು ಎಲ್ಲಾ ತರಬೇತಿ ಮತ್ತು ತಿದ್ದುಪಡಿ ಕ್ಷೇತ್ರಗಳ ದೀರ್ಘ ಮತ್ತು ನಿರಂತರ ಪ್ರಕ್ರಿಯೆಯಾಗಿದೆ. ಅದರ ಮೇಲೆ ಪ್ರಯತ್ನಿಸುತ್ತಿರಿ. ಹಾಗಾಗಿ ಅನ್ಸಾರ್‌ಗಳು ತಮ್ಮ ಮನೆಗಳಲ್ಲಿ ಪ್ರಯತ್ನಿಸುತ್ತಲೇ ಇದ್ದರು. ಇದನ್ನು ಜಮಾಅತ್ತಿನ ವ್ಯವಸ್ಥೆಗೆ ಬಿಡಬೇಡಿ, ಆದರೆ ಅನ್ಸಾರ್‌ಗಳು ತಮ್ಮ ಮಕ್ಕಳಿಗೆ ತರಬೇತಿ ನೀಡಿ. ದುಆವಿನ ಮೂಲಕ ಸಂಬಂಧಗಳನ್ನು ಮಾಡಬೇಕು, ಹೌದು, ಕೆಲವೊಮ್ಮೆ ಸಮಸ್ಯೆಗಳು ಅದರ ನಂತರ ಉದ್ಭವಿಸುತ್ತವೆ, ಆದರೆ ಅವು ತಾತ್ಕಾಲಿಕವಾಗಿರುತ್ತವೆ. ಸಾಮಾನ್ಯವಾಗಿ, ನಾವು ಸರಿಯಾದ ಪ್ರಯತ್ನವನ್ನು ಮಾಡಿದರೆ ಈ ಸಮಸ್ಯೆಗಳನ್ನು ಕಡಿಮೆ ಮಾಡಬಹುದು.

ಆಗ ಸ್ನೇಹಿತರೊಬ್ಬರು ಕೇಳಿದರು, ಪ್ರೀಯ ಹುಝೂರ್ ಅನ್ವರ್(ಅತಬಿಅ) ಅವರೇ, ಶಿಕ್ಷೆಯೂ ಪ್ರಪಂಚಕ್ಕೆ ಆವರಿಸಿದರೂ ಪ್ರಪಂಚದ ಗಮನವು ಇಮಾಮ್ ಉಝ್ಝಮಾನ್‌ನ ಕಡೆಗೆ ಸೆಳೆಯುತ್ತಿಲ್ಲ, ಆದರೆ ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ, **ಮಾಕುನ್ನ ಮುಅಝ್ಝಿಬೀನ ಹತ್ತ ನಬ್‌ಅಸ ರಸೂಲ.**

ಇದಕ್ಕೆ ಪ್ರತಿಕ್ರಿಯಿಸಿದ ಹುಝೂರ್ ಅನ್ವರ್(ಅತಬಿಅ) ಹೇಳೀದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ನೀವು ಈ ಬಗ್ಗೆ ಗಮನ ಹರಿಸದಿದ್ದರೆ, ಶಿಕ್ಷೆ ಹೆಚ್ಚಾಗುತ್ತದೆ ಮತ್ತು ನೀವು ನಾಶವಾಗುತ್ತೀರಿ ಮತ್ತು ಹಝ್ರತ್ ಮಸೀಹ್ ಂಔಊದ್(ಅ) ಮುಂದೆ ಹೀಗೂ ಹೇಳುತ್ತಾರೆ: ನೀವು ಇಸ್ಲಾಮ್ ಮತ್ತು ಅಹ್ಮದೀಯತ್ತನ್ನು ಸ್ವೀಕರಿಸಬೇಕು ಎಂಬುದು ಅಗತ್ಯವಿಲ್ಲ. ಅದನ್ನು ತಪ್ಪಿಸಲು, ನೀವು ಅಲ್ಲಾಹನ ಹಕ್ಕುಗಳನ್ನು ಮತ್ತು ದಾಸರ ಹಕ್ಕುಗಳನ್ನು ಈಡೇರಿಸಲು ಪ್ರಾರಂಭಿಸಿದರೆ ಮತ್ತು ಅಕ್ಷರಶಃ, ನಿಷ್ಪ್ರಯೋಜಕ ಮತ್ತು ಪಾಪವನ್ನು ತಪ್ಪಿಸಲು ಪ್ರಾರಂಭಿಸಿದರೆ, ಆಗಲೂ ಅಲ್ಲಾಹನ ಕರುಣೆ ಚಲಿಸುತ್ತದೆ ಮತ್ತು ನಿಮ್ಮನ್ನು ರಕ್ಷಿಸಲಾಗುತ್ತದೆ. ಶಿಕ್ಷೆಗಳು ಸಹ ತಪ್ಪಿಸುತ್ತದೆ. ಆದ್ದರಿಂದ ಜಗತ್ತು ಪ್ರಸ್ತುತ ಭೌತವಾದದಲ್ಲಿ ಮುಳುಗಿದೆ, ಇದೆಲ್ಲ ಏಕೆ ನಡೆಯುತ್ತಿದೆ ಎಂದು ಅದು ತಿಳಿದಿರುವುದಿಲ್ಲ. ಇದರ ಹೊರತಾಗಿಯೂ, ನಾವು ಎಚ್ಚರಿಸುತ್ತಲೇ ಇದ್ದೇವೆ ಮತ್ತು ಹಿಂದಿನ ದಿನಗಳಲ್ಲಿ ನಾನು ಪ್ರಪಂಚದ ನಾಯಕರಿಗೆ ಪತ್ರಗಳನ್ನು ಸಹ ಬರೆದಿದ್ದೇನೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಬಗ್ಗೆ ಅವರು ಗಮನ ಹರಿಸದಿದ್ದರೆ ಅಲ್ಲಾಹನ ವಿಪತ್ತುಗಳು ಬರುತ್ತವೆ ಎಂದು ಹೇಳಿದ್ದೇನೆ. ಈಗಲೂ, ಕೋವಿಡ್ ಅಥವಾ ಯಾವುದೇ ಸುನಾಮಿ ಅಥವಾ ಚಂಡಮಾರುತ ಅಥವಾ ಭೂಕಂಪದ ವಿಷಯಕ್ಕೆ ಬಂದಾಗ, ಗಮನ ನೀಡುತ್ತಾರೆ. ಅಲ್ಪಾವಧಿಗೆ ಅಲ್ಲಾಹ್ ಅಲ್ಲಾಹ್ ಎಂದು ಹೇಳುತ್ತಾರೆ. ಅಥವಾ ಅವರ ಧರ್ಮದ ಪ್ರಕಾರ, ಕೆಲವರು ಅಲ್ಲಾಹ್ ಅಲ್ಲಾಹ್ ಎನ್ನುತ್ತಾರೆ, ಕೆಲವರು ರಾಮ್-ರಾಮ್ ಮಾಡುತ್ತಾರೆ, ಕೆಲವರು ತಮ್ಮ ಮಾರ್ಗವನ್ನು ತೆಗೆದುಕೊಳ್ಳುತ್ತಾರೆ, ಆದರೆ ಅವರು ಪರಸ್ಪರ ಮತ್ತು ಅಲ್ಲಾಹನ ಹಕ್ಕುಗಳನ್ನು ಪೂರೈಸಲು ಸುಧಾರಿಸಲು ಪ್ರಯತ್ನಿಸುತ್ತಾರೆ. ಆದರೆ ಅದು ಹಿಂದೆ ಸರಿದಾಗ, ಮತ್ತೆ ಅವರು ತಮ್ಮ ಹಿಂದಿನ ಸ್ಥಿತಿಗೆ ಮರಳುತ್ತಾರೆ. ಅಂತಿಮವಾಗಿ, ನೀವು ನಂಬದಿದ್ದರೆ ಮತ್ತು ಅರ್ಥಮಾಡಿಕೊಳ್ಳದಿದ್ದರೆ ಇದು ಸಂಭವಿಸುತ್ತದೆ, ನಂತರ ನೀವು ನಾಶವಾಗುತ್ತೀರಿ. ಮೊದಲ ಸಮೂದಾಯಗಳು ನಾಶವಾಗಿವೆ ಮತ್ತು ಇನ್ನೂ ನಾಶವಾಗುತ್ತಿವೆ. ಅವರು ಅದೇ ರೀತಿಯಲ್ಲಿ ಕ್ರಮೇಣ ಕಣ್ಮರೆಯಾಗುತ್ತಾರೆ ಮತ್ತು ನೀತಿವಂತರು ತಮ್ಮನ್ನು ತಾವು ಸುಧಾರಿಸಿಕೊಳ್ಳುವುದನ್ನು ಮುಂದುವರಿಸುತ್ತಾರೆ. ಆದರೆ, ನಮ್ಮ ಕೆಲಸ ಎಚ್ಚರಿಸುವುದು, ಸಂದೇಶ ನೀಡುವುದು, ಬೋಧಿಸುವುದು, ಎಲ್ಲರಿಗೂ ತಲುಪುವುದು ಮತ್ತು ಉಳಿದ ಕೆಲಸ ಅಲ್ಲಾಹನದ್ದಾಗಿದೆ. ನಾವು ನಮ್ಮ ಕೆಲಸವನ್ನು ಗಂಭೀರವಾಗಿ ಮಾಡುವುದನ್ನು ಮುಂದುವರಿಸಿದರೆ, ನಮ್ಮ ಕರ್ತವ್ಯಗಳು ಈಡೇರುತ್ತವೆ ಮತ್ತು ಸರ್ವಶಕ್ತನಾದ ಅಲ್ಲಾಹನು ಈ ಜನರಿಗೆ ಮಾರ್ಗದರ್ಶನ ನೀಡಲಿ ಮತ್ತು ವಿನಾಶದಿಂದ ದೇಶಗಳನ್ನು ರಕ್ಷಿಸಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಇದು ನಮ್ಮ ಕೆಲಸ ಮತ್ತು ಜಗತ್ತು ಇರುವವರೆಗೂ ನಾವು ಇದನ್ನು ಮುಂದುವರಿಸುತ್ತೇವೆ. ಜಗತ್ತನ್ನು ಸುಧಾರಿಸಲು ನಾವು ಒಪ್ಪಂದ ಮಾಡಿಕೊಂಡಿಲ್ಲ. ಹೌದು, ನಾವು ಸ್ವೀಕರಿಸಿದ ಒಪ್ಪಂದವೆಂದರೆ ಅಲ್ಲಾಹನ ಸಂದೇಶವನ್ನು ತಿಳಿಸುವುದು ಮತ್ತು ಅಲ್ಲಾಹನ ಹಕ್ಕುಗಳನ್ನು ಈಡೇರಿಸಲು ಕಲಿಸುವುದು ಮತ್ತು ದಾಸರ ಹಕ್ಕುಗಳನ್ನು ಈಡೇರಿಸಲು ಮತ್ತು ಅವರತ್ತ ಗಮನ ಹರಿಸುವುದು ಮತ್ತು ನಂತರ ಒಟ್ಟಿಗೆ ಪ್ರಾರ್ಥಿಸುವುದು. ನಾವು ಈ ಕರ್ತವ್ಯವನ್ನು ಪೂರೈಸುತ್ತಿದ್ದರೆ, ನಾವು ಅದನ್ನು ವಾಸ್ತವದಲ್ಲಿ ಪೂರೈಸುತ್ತೇವೆ ಮತ್ತು ಅದನ್ನು ಗಂಭೀರವಾಗಿ ಪೂರೈಸುತ್ತೇವೆ, ಆಗ ನಾವು ಮುಕ್ತರಾಗುತ್ತೇವೆ, ಉಳಿದವು ಅಲ್ಲಾಹ್ ಮತ್ತು ಅವನ ದಾಸರ ವಿಷಯವಾಗಿದೆ.

**(ಅಖ್ಬರ್ ಅಲ್-ಫಜಲ್ ಇಂಟರ್ನ್ಯಾಷನಲ್ 27/ಆಗಸ್ಟ್ 2021 ಗೆ ಧನ್ಯವಾದಗಳು)**

## ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ.

***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು “ಹಕಮ್” ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು “ಮುಹೈಮಿನ್” ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವಶಕ್ತನಾದ ದೇವನ ಪ್ರಕಾಶವಾಗಿದೆ. **(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖ಼ಝಾ಼ಇನ್ ಸಂಪುಟ-16, ಪುಟ-103)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 04 August 2022, Issue No. 31

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 30ರ ಉಳಿದ ಭಾಗ)**

### ಮಸ್ಜಿದ್ ಬೈತುಲ್ ಖಾದಿರ್ (Vechta) ನ ಉದ್ಘಾಟನೆ ಮತ್ತು ಮಸ್ಜಿದ್ ದಾರುಸ್ಸಲಾಮ್ (Isemohen) ನ ಅಡಿಗಲ್ಲಿನ ಇಡುವ ಸಮಾರಂಭದ ಸಮಾಚಾರಗಳನ್ನು ಮಾಧ್ಯಮದವರು ಸೆರೆ ಹಿಡಿದರು.

* Oldenburgllche volkszeifung ನಲ್ಲಿ ಮಸ್ಜಿದ್ ಬೈತುಲ್ ಖಾದಿರ್ ಉದ್ಘಾಟನೆ ಕುರಿತು ಕೆಳಗೆ ನಮೂದಿಸಿದಂತೆ ಸುದ್ಧಿಗಳು ಪ್ರಸಾರವಾದವು.

"ಖಲೀಫ'ರು Vechta ನಲ್ಲಿ ಹೊಸ ಮಸೀದಿಯನ್ನು ಉದ್ಘಾಟಿಸುತ್ತಿದ್ದಾರೆ. ಇಂದು ಅಹ್ಮದಿಯಾ ಜಮಾಅತ್ ಸಂಭ್ರಮಿಸುತ್ತಿದೆ. ಅವರ ನೇತಾರರ ಭಾಷಣ ಲೋಕದಾದ್ಯಂತ ಪ್ರಸಾರಗೊಳ್ಳುತ್ತಿದೆ. ಈ ಇಸ್ಲಾಮಿ ಸಂಸ್ಥೆಯು ತನ್ನದೇ ಆದ ಒಂದು ದೂರದರ್ಶನ ಚಾನಲ್ ಹೊಂದಿದೆ. ಹೊಸ ಕಟ್ಟಡದ ಖರ್ಚು ಚಂದಾ ಮೂಲಕವೇ ನಿಭಾಯಿಸಲಾಯಿತು.

Vechta ಹೊಸ ಕಟ್ಟಡದ ಕಚೇರಿಯಲ್ಲಿ ಒಂದೇ ಹಲಗೆ ಇದೆ ಅದರ ಮೇಲಿರುವ ಬರಹ ಹೀಗಿದೆ. "ಮಸ್ಜಿದ್ ಬೈತುಲ್ ಖಾದಿರ್" ಅದರ ಅರ್ಥ "ಸಮರ್ಥ ದೇವನ ಗೃಹ" ಅಹ್ಮದಿಯ ಮುಸ್ಲಿಂ ಜಮಾಅತ್ ಅದನ್ನು ಗೋಡೆಯಲ್ಲಿ ಸ್ಥಾಪಿಸುವರು.

ಪಂಚಮ ಖಲೀಫರು, ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್, ಮಸೀದಿಯನ್ನು ಉದ್ಘಾಟಿಸುವರು. ಅವರು ಈ ಮುಂಚೆಯೇ ಅಕ್ಟೋಬರ್ 2011 ರಲ್ಲಿ ಸ್ವಯಂ ಈ ಮಸೀದಿಗೆ ಅಡಿಗಲ್ಲು ಹಾಕಿದ್ದರು. ಈ ಮಸೀದಿಯಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕವಾದ ಎರಡು, 65 ಚದರ ಮೀಟರ್‌ಗಳ ನಮಾಝಿನ ಕೋಣೆಗಳಿವೆ. ಅದಲ್ಲದೇ ಆ ಕಟ್ಟಡದಲ್ಲಿ ಎರಡು ಕಚೇರಿಗಳು, ಎರಡು ಸ್ನಾನಗೃಹಗಳು, ಶೌಚಾಲಯ ಸಮೇತ ಒಂದು ಗ್ರಂಥಾಲಯದೊಂದಿಗೆ ವಿವಿಧೋದ್ದೇಶ ಸಭಾಂಗಣವೂ ಇದೆ.

* ಅದೇ ಪತ್ರಿಕೆ oldenburgilche volkszeitung ನ 9 ಜೂನ್ 2015 ರ ಸಂಚಿಕೆಯಲ್ಲಿ ಮಸ್ಜಿದ್ ಬೈತುಲ್ ಖಾದಿರ್ ಉದ್ಘಾಟನೆಯ ಕುರಿತು ಈ ಕೆಳಗಿನಂತೆ ಸುದ್ಧಿ ಬಿತ್ತರಿಸಲಾಗಿತ್ತು.

Vechta ಅಹ್ಮದಿ ಮುಸಲ್ಮಾನರಿಗೆ ಇಂದಿನ ದಿನ ತುಂಬಾ ಪ್ರಮುಖವಾದ ದಿನವಾಗಿದೆ. ಲೋಕದಾದ್ಯಂತ ಹರಡಿರುವ ಈ ಇಸ್ಲಾಮಿ ಸಂಘಟನೆ ಜಿಲ್ಲೆಯ ನಗರ ಭಾಗದಲ್ಲಿ ಒಂದು ಹೊಸ ಮಸೀದಿ ಉದ್ಘಾಟಿಸುತ್ತಿದೆ. ನಸೀರ್ ಬಟ್‌ರವರು vechta ದಲ್ಲಿ 154 ಅಹ್ಮದಿಯರಿಗೆ ಅಧ್ಯಕ್ಷರಾಗಿರುವರು. ಅವರು ಈ ಸಂದರ್ಭದಲ್ಲಿ ರಾಜಕೀಯ ಮತ್ತು ರಾಜಕೀಯೇತರ ಅತಿಥಿಗಳನ್ನು ಬರಮಾಡಿಕೊಂಡರು. ಅವರು ಹೇಳಿದರು. ಅತೀ ಶೀಘ್ರದಲ್ಲಿ ಮಸೀದಿಯಲ್ಲಿ ಒಂದು Open day ಆಯೋಜಿಸಿ ಆಹ್ವಾನಿಸುವ ಇರಾದೆ ಹೊಂದಿದ್ದಾರೆ.

* ಅದೇ ಪತ್ರಿಕೆ oldenburgische volkszeitung 10 ಜೂನ್ 2015ರ ತನ್ನ ಪ್ರಸಾರದಲ್ಲಿ ಬೈತುಲ್ ಖಾದಿರ್ ಉದ್ಘಾಟನೆಯ ಸುದ್ಧಿ ನೀಡುತ್ತ ಬರೆಯುತ್ತದೆ.

ಖಲೀಫಾ ಸಾಹಿಬ್ Vechta ದಲ್ಲಿ ಮಸೀದಿಯನ್ನು ಉದ್ಘಾಟಿಸುತ್ತಿದ್ದಾರೆ.

ಅಹ್ಮದಿ ಮುಸಲ್ಮಾನರು 150 ಕ್ಕಿಂತ ಹೆಚ್ಚಿನ ಅತಿಥಿಗಳು ತನ್ನ ನೇತಾರರೊಂದಿಗೆ ಉದ್ಘಾಟನಾ ಸಮಾರಂಭವನ್ನು ಆಚರಿಸುತ್ತಿದ್ದಾರೆ.

ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ನೇತಾರರು ನಿನ್ನೆ ಸಂಜೆ vechta ನಲ್ಲಿ ಒಂದು ಹೊಸ ಮಸೀದಿಯನ್ನು ಉದ್ಘಾಟಿಸಿದರು. ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ತನ್ನ ಜಮಾಅತ್ ಸದಸ್ಯರಿಗೆ ಉಪದೇಶ ಮಾಡಿದರು. ಈಗ ಮೊದಲಿಗಿಂತ ಹೆಚ್ಚು ಪ್ರಗತಿ ಕಾರ್ಯಗಳಿಗೆ ಗಮನ ನೀಡಬೇಕು. ಖಲೀಫರು 150 ಅತಿಥಿಗಳ ಮುಂದೆ (ವಿವಿಧ ವರ್ಗಗಳಿಗೆ ಸಂಬಂಧಿಸಿದ ಜನರು ಶಾಮೀಲಾಗಿದ್ದರು) ಪ್ರೀತಿ ಹರಡಬೇಕು, ಅನ್ಯ ಧರ್ಮಿಯರೊಂದಿಗೆ ಸಮಾನತೆಯಿಂದ ವರ್ತಿಸಬೇಕು ಎಂಬ ಶಿಕ್ಷಣ ನೀಡಿದರು. ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಕಾರ ಹಲವು ಮಿಲಿಯನ್ ಅನುಯಾಯಿಗಳು ಮತ್ತು vechta ದಲ್ಲಿ ಅವರ ಸಂಖ್ಯೆ 154 ಯಿದೆ. ಈ ಸಮಾಚಾರದೊಂದಿಗೆ ಹುಝೂರೆ ಅನ್ವರ್ ಅವರ ಭಾವಚಿತ್ರವನ್ನು ಸಹ ಪ್ರಕಟಿಸಲಾಗಿತ್ತು. ಅದರಲ್ಲಿ ನಗರದ ಮೇಯರ್ Claus Dasinghalls ಹುಝೂರೆ ಅನ್ವರ್ ಅವರಿಗೆ ಪಾರಿತೋಷಕ ಕೊಡುವುದನ್ನು ತೋರಿಸಲಾಗಿತ್ತು.

ಅದೇ ಸಮಾಚಾರ ಪತ್ರಿಕೆಯಲ್ಲಿ "ಖಲೀಫಾ ಸಾಹಿಬ್ ಧರ್ಮ ಧರ್ಮಗಳ ಮಧ್ಯೆ ಸಮಾನತೆಯಿಂದ ಇರಲು ಉಪದೇಶ" ಎಂಬ ಶೀರ್ಷಿಕತೆಯೊಂದಿಗೆ ಇನ್ನಷ್ಟು ವಿವರ ನೀಡುತ್ತಾ ಇನ್ನೊಂದು ಸುದ್ಧಿ ಪ್ರಕಟಿಸಿದರು.

ಅಹ್ಮದಿ ಮುಸ್ಲಿಮ್ ಜಮಾಅತಿನ ಜಾಗತಿಕ ನೇತಾರರು ಮುಸಲ್ಮಾನರಿಗೆ (Integratc) ಐಕ್ಯಮತದಿಂದಿರಲು ಗಮನಸೆಳೆದರು.

150 ಕ್ಕಿಂತ ಹೆಚ್ಚು ಅತಿಥಿಗಳು vechta ಮಸೀದಿಯ ಉದ್ಘಾಟನದಲ್ಲಿ ಪಾಲ್ಗೊಂಡಿದ್ದರು. ಈ ಮಸೀದಿಯ ಹೆಸರು **"ಬೈತುಲ್ ಖಾದಿರ್",** ಅಂದರೆ ಅಲ್ಲಾಹನ ಮನೆ ಎಂದಾಗಿದೆ. ಅಹ್ಮದಿ ಮುಸಲ್ಮಾನರು ಈ ದಿನಕ್ಕಾಗಿ ಕಾದು ಕುಳಿತಿದ್ದರು. ಅವರುಗಳು ಘೋಷಣೆಗಳೊಂದಿಗೆ ಮಿರ್ಝಾ ಮಸ್ರೂರ್ ಅಹ್ಮದ್ ಅವರಿಗೆ ಸ್ವಾಗತ ಕೋರುತ್ತಿದ್ದರು. ಬಾಲಕರು ಗೀತೆಗಳನ್ನು ಹಾಡುತ್ತಿದ್ದರು. ಜೊತೆಯಲ್ಲಿ ಧ್ವಜಗಳನ್ನು ಹಾರಿಸುತ್ತಿದ್ದರು. ಖಲೀಫತುಲ್ ಮಸೀಹ್ ಮಸೀದಿಯ ಹೊರಗೋಡೆಯಲ್ಲಿ ಸ್ಥಾಪಿತಗೊಂಡ ಹಲಗೆಯಿಂದ ಪರದೆಯನ್ನು ಅನಾವರಣ ಮಾಡುತ್ತಿದ್ದಾರೆ. ಈ ಹಲಗೆಯ ಮೇಲೆ "ಮಸ್ಜಿದ್ ಬೈತುಲ್ ಖಾದಿರ್ ಎಂದು ಬರೆಯಲಾಗಿದೆ. ಅದರ ಅರ್ಥ "ಸಮರ್ಥ ದೇವನ ಮನೆ" ಅನಂತರ ಖಲೀಫರು ನಮಾಝ್ ನಿರ್ವಹಿಸಲು ಮಸೀದಿಗೆ ತೆರಳಿದರು.

ಖಲೀಫತುಲ್ ಮಸೀಹ್ ಅವರ ಉಪಸ್ಥಿತಿಯು ಅ ಮಸೀದಿಯ ಉದ್ಘಾಟಿಸುವ ಮಹತ್ವ ಸಾರುವಂತಿತ್ತು. ಹಝ್ರತ್ ಮಿರ್ಝಾ ಮಸ್ರೂರ್ ಅವರಿಗೆ 150 ಅತಿಥಿಗಳನ್ನು ಅದರಲ್ಲಿ ರಾಜಕಾರಣಕ್ಕೆ ಸಂಬಂಧಪಟ್ಟವರು, ಚರ್ಚ್ ಇತ್ಯಾದಿಗೆ ಸಂಬಂಧಪಟ್ಟವರು ಸೇರಿದ್ದನ್ನು ನೋಡಿ ತುಂಬಾ ಸಂತೋಷಪಟ್ಟರು. ಅವರು ಹೇಳಿದರು. ನೀವುಗಳು ಅಹ್ಮದಿ ಅಲ್ಲದಿದ್ದರೂ ಇಲ್ಲಿ ಆಗಮಿಸಿದ್ದು ತಮ್ಮ ಸಹೋದರತೆಯನ್ನು ತಿಳಿದು ಬರುತ್ತದೆ.

ಅಹ್ಮದಿ ಸದಸ್ಯರಿಗೆ ಅವರು ಮೊದಲಿಗಿಂತ ಹೆಚ್ಚು ಸಮಾಜದ ಪ್ರಗತಿಗಾಗಿ ದುಡಿಯುವಂತೆ ಗಮನ ಸೆಳೆದರು. ಖಲೀಫತುಲ್ ಮಸೀಹ್ ತನ್ನ ಭಾಷಣದಲ್ಲಿ ಹೇಳಿದರು. ನೀವು ಪ್ರಗತಿಯಲ್ಲಿ ಕೈ ಜೋಡಿಸಲಿಲ್ಲ ಎಂದರೆ ಅದರ ಅರ್ಥ ನೀವು ಐಕ್ಯತೆ ಸಾದಿಸಲಿಲ್ಲ ಎಂದಾಗುತ್ತದೆ. ಈ ದೇಶದೊಂದಿಗೆ ನಿಷ್ಠೆ ಹೊಂದುವುದು ನಿಮ್ಮ ಧರ್ಮದ ಭಾಗವಾಗಿದೆ.

ಖಲೀಫತುಲ್ ಮಸೀಹ್ ಧರ್ಮ ಧರ್ಮಗಳ ಮಧ್ಯೆ ಪ್ರೀತಿ ಮತ್ತು ಸಹೋದರತೆಯಿಮದ ವರ್ತಿಸಲು ಉಪದೇಶ ಮಾಡಿದರು. ಅವರು ಹೇಳಿದರು. ಎಲ್ಲ ಧರ್ಮಗಳು ಪ್ರೀತಿ ಮತ್ತು ಸ್ನೇಹದ ಶಿಕ್ಷಣವೇ ಹೊಂದಿವೆ. ಆದರೆ ಮನುಷ್ಯರೇ ಅದನ್ನೂ ಹಾಳುಗೆಡವಿದ್ದಾರೆ. ನಾವು ಕಲ್ಲುಗಳಿಂದ ಮಸೀದಿಯಂತೂ ಕಟ್ಟಿದ್ದೇವೆ. ಆದರೆ ನಮ್ಮ ಹೃದಯಗಳು ಕಲ್ಲಿನಂತೆ ಕಠಿಣವಾಗಿರಬಾರದು.

ನಗರದ ಮೇಯರ್ Claus Deling halls ಮತ್ತು MPA Dr. Stephan Siemen ಅವರುಗಳು ಸಹ ಈ ಉದ್ಘಾಟನೆಯ ಕುರಿತು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಈ ಸಮಾಚಾರದೊಂದಿಗೆಯೂ ಹುಝೂರೆ ಅನ್ವರ್ ಅವರ ಚಿತ್ರ ಪ್ರಕಟಿಸಲಾಗಿತ್ತು. ಅದರಲ್ಲಿ ಹುಝೂರ್ ದುಆ (ಪ್ರಾರ್ಥನೆ) ಮಾಡಿಸುತ್ತಿದ್ದರು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.